# ಅಂಶ - 9 ಜಾನಪದ ಸಾಹಿತ್ಯ

ವಿಷಯ ಕ್ರಮ

9.0 ಉದ್ದೇಶ
9.1 ಪೀಠಿಕೆ
9.2 ಜಾನಪದ ಸಾಹಿತ್ಯವೆಂದರೇನು
    9.2.1 ಜಾನಪದ ಸಾಹಿತ್ಯದ ಪ್ರಕಾರಗಳು
9.3 ಜನಪದ ಗೀತೆ
9.4 ಲಾವಣಿ
9.5 ಗಾದೆ
9.6 ಒಗಟು
    9.6.1 ರೂಪ ಪ್ರಧಾನಒಗಟುಗಳು
    9.6.2 ಕ್ರಿಯಾ ಪ್ರಧಾನಒಗಟುಗಳು
    9.6.3 ಅರ್ಥ ಪ್ರಧಾನಒಗಟುಗಳು

**ಅಭ್ಯಾಸ - 1**
9.7 ಜಾನಪದ ಕಥೆ
    9.7.1 ಸಟಗೊಂಡವನಿಗೆ ಆಟಗೋಲು
    9.7.2 ತೀಸ್ ಮಾರಖಾ - ಜಂಬದ ಕೋಳಿ
    9.7.3 ಮಾಣೀಬುದ್ಧಿ

**ಅಭ್ಯಾಸ - 2**
9.8 ಸಾರಾಂಶ

**ಅಭ್ಯಾಸಗಳಿಗೆ ಉತ್ತರಗಳು**

## 9.0 ಉದ್ದೇಶ

ಈ ಅಂಶವನ್ನು ನೀವು ಓದಿದ ಮೇಲೆ

- ಜಾನಪದದ ಸಂಪೂರ್ಣ ಅರ್ಥ ನಿಮಗುಂಟಾಗುತ್ತದೆ.
- ಜಾನಪದವು ನಮ್ಮ ಜನಜೀವನದಲ್ಲಿ ಹೇಗೆ ಹಾಸುಹೊಕ್ಕಾಗಿದೆ ಎಂಬುದನ್ನು ಗಮನಿಸುವಿರಿ.
- ಗಾದೆ, ಒಗಟುಗಳು ನಮ್ಮ ಜೀವನದಲ್ಲಿ ಹೇಗೆ ಬೆರೆತಿದೆಯೋ ಗಮನಿಸುವಿರಿ.
- ವಿವಿಧ ಪ್ರಾಂತೀಯ ಭೇದಗಳಲ್ಲಿರುವ ಜನಪದವನ್ನು ಪರಿಚಯಿಸಿಕೊಳ್ಳುವಿರಿ.
- ಭಾಷೆಯ ಸುಕುಮಾರತ್ವವನ್ನು, ಭಾವದ ಗಾಂಭೀರ್ಯವನ್ನು ಇಲ್ಲಿ ಗಮನಿಸುವಿರಿ.

## 9.1 ಪೀಠಿಕೆ

ನೀವು ಪಂಪ, ರನ್ನರಂತಹ ಮಹಾಕವಿಗಳ ಹೆಸರನ್ನು ಕೇಳಿರಬಹುದು, ಹಲವಾರು ಇಂದಿನ ನಮ್ಮ ಕವಿಗಳ ಹೆಸರನ್ನು ಕೇಳಿರಬಹುದು, ಅವರ ಕವಿತೆ, ಕಾವ್ಯಗಳನ್ನು ಓದಿರಬಹುದು. ಆದರೆ ಓದು ಬರಹ ಬಾರದ ನಮ್ಮ ಹಳ್ಳಿಯ ಜನ ನಾನಾ ರೀತಿಯ ಹಾಡುಗಳನ್ನು, ಕತೆಗಳನ್ನು, ಗಾದೆಗಳನ್ನು ಒಗಟುಗಳನ್ನು ಹೇಳುತ್ತಾ, ಕೇಳುತ್ತಾ ತಮ್ಮ ದುಡಿತದ ಶ್ರಮವನ್ನು ಪರಿಹರಿಸಿಕೊಳ್ಳುತ್ತಾರೆ; ಅಂತಹ ಸಾಹಿತ್ಯದ ಕವಿ ಯಾರು? ಕಾಲ ಯಾವುದು? ಎಂಬುದರ ತಿಳಿವಳಿಕೆಯೇ ನಮಗಿರುವುದಿಲ್ಲ. ಬಾಯಿಂದ ಬಾಯಿಗೆ ಪರಂಪರೆಯಿಂದ ಇಳಿದು ಬಂದು ಇಂದಿಗೂ ಉಳಿದಿರುವ ಈ ಕಾವ್ಯ ರಾಶಿ ಜನಜೀವನದೊಡನೆ ಬೆರೆತುಕೊಂಡಿದೆ. ಇಂತಹ ಕಾವ್ಯದ ಸ್ವರೂಪ, ಆಶಯಗಳನ್ನು ತಿಳಿದುಕೊಳ್ಳುವುದರಿಂದ ನಮ್ಮ ಜನಜೀವನದ, ಸಂಸ್ಕೃತಿಯ, ನಮ್ಮ ಜನರ ಹೃದಯವಂತಿಕೆಯ ನಿಕಟ ಪರಿಚಯ ನಮಗಾಗುತ್ತದೆ. ಇಂತಹ ಒಂದು ಸಾಹಿತ್ಯ ಸಂಪತ್ತಿನ ಬಗ್ಗೆ ಈ ಪಾಠದಿಂದ ಕೆಲವುಮಟ್ಟಿಗೆ ತಿಳಿದುಕೊಳ್ಳೋಣ.

## 9.2 ಜಾನಪದ ಸಾಹಿತ್ಯವೆಂದರೇನು

ಜಾನಪದವೆಂಬುದು ಜನಪದ ಜೀವನದ ಸಮಷ್ಟಿ ಅಭಿವ್ಯಕ್ತಿ. ಆದ್ದರಿಂದ ಜಾನಪದವೆಂಬುದು ಕೇವಲ ಸಂಪ್ರದಾಯ ಮಾತ್ರ ಆಗಿರದೆ ಜನಪದರ ಸಮಷ್ಟಿ ಕ್ರಿಯೆಯಾಗಿದೆ. ಜನಪದವೆಂಬುದು ಸಮಾನ ಧರ್ಮವುಳ್ಳ ಜನಸ್ತೋಮ ಅಥವಾ ಜನಗಳ ಗುಂಪು. ಭಾಷೆ, ನಂಬಿಕೆ, ಆಚರಣೆ, ಧರ್ಮ ಮುಂತಾದ ವಿಚಾರದಲ್ಲಿ ಯಾವುದಾದರೂ ಒಂದರಲ್ಲಿ ಸಮಾನತೆ ಇದ್ದರೂ ಆ ಗುಂಪು ಜನಪದವೆಂದು ಕರೆಸಿಕೊಳ್ಳುತ್ತದೆ. ಈ ವಿಶಾಲಾರ್ಥದಲ್ಲಿ ನೋಡಿದಾಗ ಕನ್ನಡ ಜನಪದ, ರೈತ ಜನಪದ, ಕಾರ್ಮಿಕ ಜನಪದ ಹೀಗೆ ಅನೇಕ ಜನಪದ ಗುಂಪುಗಳನ್ನು ಗುರುತಿಸಬಹುದು.

### 9.2.1 ಜಾನಪದ ಸಾಹಿತ್ಯದ ಪ್ರಕಾರಗಳು

ಜಾನಪದವನ್ನು ಮುಖ್ಯವಾಗಿ ವಿಷಯಕಜಾನಪದ ಮತ್ತು ಅಭಿವ್ಯಕ್ತಿಕಜಾನಪದ ಎಂದು ಎರಡು ಪ್ರಕಾರವಾಗಿ ಗುರುತಿಸಬಹುದು. ಜನಪದರ ಊಟ, ವಸತಿ, ಅಡಿಗೆ, ಉಡುಗೆ, ಔಷಧೋಪಚಾರ ಮುಂತಾದವು ವಿಷಯಕ ಜಾನಪದದ ಅಂಗಗಳಾಗಿವೆ. ಗಾದೆ, ಒಗಟು, ಕಥೆ, ಹಾಡು, ಪುರಾಣ, ಕುಣಿತ, ಚಿತ್ರಕಲೆ, ಆಟ, ಮುಂತಾದವು ಅಭಿವ್ಯಕ್ತಿಕಜಾನಪದದ ಅಂಗಗಳಾಗುತ್ತವೆ. ಅಭಿವ್ಯಕ್ತಿಕಜಾನಪದವನ್ನು ಮುಖ್ಯವಾಗಿ ಮೌಖಿಕ ಮತ್ತು ಅಮೌಖಿಕ ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಮೌಖಿಕ ಜಾನಪದ ಮೂಲಭೂತವಾಗಿ ಭಾಷೆಯನ್ನವಲಂಬಿಸಿದೆ. ಉದಾಹರಣೆಗೆ, ಕಥೆ, ಹಾಡು, ಒಗಟು, ಗಾದೆ ಮುಂತಾದವು ಭಾಷೆಯ ಮೂಲಕ ವ್ಯಕ್ತವಾಗಿವೆ. ಆದರೆ ಅಮೌಖಿಕ ಜಾನಪದಪ್ರಕಾರ ಭಾಷೆಯನ್ನವಲಂಬಿಸದೆ ಅಭಿನಯಪ್ರಧಾನವಾಗಿದೆ. ಉದಾಹರಣೆಗೆ ಕುಣಿತ, ಆಟ ಮುಂತಾದವು. ಭಾಷೆಯ ಮೂಲಕ ಅಭಿವ್ಯಕ್ತಿಗೊಂಡಿರುವ ಜಾನಪದದ ಅಧ್ಯಯನ ಸಾಕಷ್ಟು ಪ್ರಮಾಣದಲ್ಲಿ ನಡೆದಿದೆ. ಕಥೆ, ಹಾಡು, ಒಗಟು, ಲಾವಣಿ, ಗಾದೆ ಮುಂತಾದ ಪ್ರಕಾರಗಳಿಗೆ ತನ್ನದೇ ಆದ ಭಾಷಾವೈಶಿಷ್ಟ್ಯ ಇರುವುದರಿಂದ ಅವುಗಳನ್ನು ವಿಶ್ಲೇಷಿಸಿ ನೋಡುವ ಕಾರ್ಯ ಇತ್ತೀಚೆಗೆ ಹೆಚ್ಚಾಗಿ ನಡೆದಿದೆ.

ಯಾವುದೇ ವ್ಯಕ್ತಿ ತನ್ನ ನಾಡಿನ, ತನ್ನ ರಾಷ್ಟ್ರದ ಸಂಸ್ಕೃತಿಯನ್ನು ಅರಿಯಬೇಕಾದರೆ ಸಾವಿರಾರು ವರ್ಷಗಳಿಂದ ಮೌಖಿಕಪರಂಪರೆಯಾಗಿ ಹರಿದು ಬಂದ ಜಾನಪದವನ್ನು ಅರಿಯಬೇಕಾಗುತ್ತದೆ. ಪ್ರತಿಯೊಂದು ರಾಷ್ಟ್ರದ ನಾಗರಿಕತೆಯ ಭದ್ರ ಬುನಾದಿ ಜಾನಪದದ ಮೇಲೆ ನಿಂತಿರುತ್ತದೆ. ಇದನ್ನು ಅರಿಯುವುದರಿಂದ ಕಾಲ, ದೇಶ, ಸಂದರ್ಭಗಳ ಸಾಮಾಜಿಕ ಜೀವನ, ಆರ್ಥಿಕ ಸ್ಥಿತಿಗತಿ, ಧರ್ಮ, ನಂಬಿಕೆ, ಆಚರಣೆ ಮುಂತಾದ ಅನೇಕ ಅಂಶಗಳು ಗೊತ್ತಾಗುತ್ತವೆ. ಆದ್ದರಿಂದ ಜಗತ್ತಿನ ಎಲ್ಲ ವಿದ್ವಾಂಸರೂ ಜಾನಪದ ಅಧ್ಯಯನಕ್ಕೆ ವಿಶೇಷ ಮಹತ್ವ ನೀಡಿದ್ದಾರೆ. ಜಾನಪದ ಅಧ್ಯಯನ, ವಿಶ್ಲೇಷಣೆಗಳಿಂದ ತಮ್ಮ ರಾಷ್ಟ್ರದ ಪುರಾತನ ಸಂಸ್ಕೃತಿಯ ರೂಪ ರೇಷೆಗಳನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಇಂದಿನ ವೈಜ್ಞಾನಿಕತೆಯ, ಆಧುನಿಕ ನಾಗರಿಕತೆಯ ತಾಯಿಬೇರುಗಳನ್ನು ಜಾನಪದದಲ್ಲಿ ಹುಡುಕಿ ತೆಗೆಯಲು ಪ್ರಯತ್ನಿಸಿದ್ದಾರೆ. ನಮ್ಮ ಇಂದಿನ ಅಸ್ತಿತ್ವಕ್ಕೆ ಕಾರಣವಾದ ಅನೇಕ ಅಂಶಗಳನ್ನು ನಮ್ಮ ಜಾನಪದ ಇತಿಹಾಸದ ಸಾಗರದಿಂದ ಹೆಕ್ಕಿ ತೆಗೆಯಲು ಬರುತ್ತದೆ ಎಂದು ತೋರಿಸಿದ್ದಾರೆ. ಜಾನಪದ ಅಭಿವ್ಯಕ್ತಿಗೊಳ್ಳುವುದು ಎರಡು ಮುಖ್ಯ ಮಾಧ್ಯಮಗಳ ಮೂಲಕ. ಮೊದಲನೆಯದು ಮಾತು, ಎರಡನೆಯದು ಕೃತಿ. ಜಾನಪದವೆಂಬುದು ಮಾತು ಕೃತಿಗಳ ಸಂಬಂಧವನ್ನು ಪೂರ್ಣಗೊಳಿಸುತ್ತದೆ. ಹಾಗಾಗಿ ಮಾತು ಮತ್ತು ಕೃತಿಗಳ ಮೂಲಕ ಜಾನಪದ ಅನೇಕ ಬಗೆಯಾಗಿ ಅಭಿವ್ಯಕ್ತಿಗೊಂಡಿದೆ. ಪುರಾಣ, ಐತಿಹ್ಯ, ಕಥೆ, ಗೀತೆ, ಗಾದೆ, ಒಗಟು ಮೊದಲಾದ ಶಾಬ್ದಿಕ ಪ್ರಕಾರಗಳಿಗೆ 'ಮಾತು' ಮಾಧ್ಯಮವಾಗಿರುವಂತೆ, ನಂಬಿಕೆ, ಸಂಪ್ರದಾಯ, ಆಚರಣೆ, ಚಿತ್ರ, ನೃತ್ಯ ಆಟಪಾಟಗಳಿಗೆ ಕೃತಿ ಮಾಧ್ಯಮವಾಗಿದೆ. ಸಾಮಾನ್ಯ ವ್ಯಕ್ತಿಗಳಿಂದ ನಿರ್ಮಾಣಗೊಂಡು ಸಾಮೂಹಿಕ ಅಭಿವ್ಯಕ್ತಿಯಾಗಿ ಸೃಷ್ಟಿಗೊಂಡ ಜಾನಪದ ನಿರಂತರವಾಗಿ ಸಾಗುತ್ತಾ ಬಂದಿದೆ. ಕಾಲಪ್ರವಾಹದ ಎದುರು ಈಸಿ, ಅನೇಕ ರೂಪಾಂತರಗಳಿಗೊಳಗಾಗಿ ನೂರಾರು ಮುಖವಾಗಿ ಅಭಿವ್ಯಕ್ತಿಗೊಂಡ ಜಾನಪದ, ಪ್ರಕೃತಿಯಂತೆ ತಾನೇ ತಾನಾಗಿ ಬೆಳೆದು ಬಂದಿದೆ. ಎಲ್ಲಿಯವರೆಗೆ ಪ್ರಕೃತಿಯ ಬೆಳವಣಿಗೆಗೆ ಪರಿಸರ ಪೂರಕವಾಗಿರುತ್ತದೆಯೋ, ಅಲ್ಲಿಯವರೆಗೆ ಹುಲುಸಾಗಿ ಬೆಳೆಯುತ್ತದೆ. ಪರಿಸರ, ವಿಕೋಪದಿಂದ ಹಾನಿಗೆ ತುತ್ತಾದರೂ ಹೇಗೋ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರುವ ಪ್ರಕೃತಿಯ

ಚಲುವಿನಂತ, ಜಾನಪದ ಮುಂದುವರಿಯುತ್ತಾ ಸಾಗುತ್ತದೆ. ಅದರೊಳಗೆ ನಮ್ಮ ಇಂದಿನ ಅಸ್ತಿತ್ವದ ನೂರಾರು ಛಾಯೆಗಳು ಮೂಡುತ್ತವೆ.

## 9.3 ಜನಪದ ಗೀತೆ

ಜನಸಮೂಹದ ನಡುವೆ ವಾಕ್ಸಂಪ್ರದಾಯದ ಮೂಲಕ ಹರಿದು ಬಂದಿರುವ ಕಾವ್ಯ ಮತ್ತು ಸಂಗೀತಗಳ ಸಮಾವೇಶವೇ ಜನಪದ ಗೀತೆ. ಯಾವುದೋ ಒಂದು ಕ್ಷಣದಲ್ಲಿ ಆನಂದ ತುಂಬಿ ತುಳುಕಿದಾಗ ನೋವು ಮನಸ್ಸನ್ನು ಕಾಡಿದಾಗ, ಆ ಪಾಡೇ ಹಾಡಾಗುತ್ತದೆ. ಬಾಯಿಂದ ಬಾಯಿಗೆ ಹರಿಯುವ ಗುಣ ಈ ಕಾವ್ಯದ ಪ್ರಮುಖ ಲಕ್ಷಣವಾಗಿರುವುದರಿಂದ, ಅದು ಕಾಲಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ರೂಪಾಂತರಗೊಳ್ಳುತ್ತದೆ. ಸಾವಿರಾರು ಜನ ಅದನ್ನು ಹಾಡುತ್ತಾ ಬದಲಾಯಿಸುತ್ತ ಬರುವುದರಿಂದ ಅದು ಸಾಮುದಾಯಿಕ ಸೃಷ್ಟಿಯಾಗುತ್ತದೆ. ಇಂತಹ ಗೀತೆಗಳ ಶಿಲ್ಪ ಸರಳವಾಗಿರುವುದಲ್ಲದೆ ಶೈಲಿ ಸಹಜವಾಗಿರುತ್ತದೆ. ತಾಯಿ ತೊಟ್ಟಿಲು ತೂಗುತ್ತಾ, ಹೆಣ್ಣು ರಾಗಿ ಬೀಸುತ್ತಾ, ರಸಿಕ ಗಾಡಿ ಹೊಡೆಯುತ್ತಾ, ರೈತರು ನಾಟಿ ಹಾಕುತ್ತಾ ಮಕ್ಕಳು ಆಟ ಆಡುತ್ತಾ ಹಾಡುವಾಗ ಅದೇ ಜನಪದ ಗೀತೆಯಾಗುತ್ತದೆ.

ಜನಪದ ಗೀತೆ ಸಾಹಿತ್ಯ ಪ್ರಮುಖವಾಗಿ ಎರಡು ಪ್ರಕಾರದ್ದಾಗಿದೆ. ಒಂದು ಗೀತೆ, ಮತ್ತೊಂದು ಲಾವಣಿ. ಗೀತೆ ಸಾಮಾನ್ಯವಾಗಿ ಭಾವಗೀತಾತ್ಮಕವಾಗಿದ್ದರೆ, ಲಾವಣಿ ಕಥಾತ್ಮಕವಾಗಿರುತ್ತದೆ. ಎರಡೂ ಪ್ರಕಾರಗಳು ಹಾಡಲ್ಪಡುವುದರಿಂದ ಅವುಗಳನ್ನು ಒಂದೇ ಪ್ರಕಾರದಲ್ಲಿ ಸೇರಿಸುತ್ತಾರೆ. ಗೀತೆ ಭಾವನಿಷ್ಠ ಅಭಿವ್ಯಕ್ತಿಯಾಗಿದ್ದರೆ, ಲಾವಣಿ ವಸ್ತುನಿಷ್ಠ ಅಭಿವ್ಯಕ್ತಿಯಾಗಿದೆ. ಗೀತೆ ಪುರಾತನ ಸೃಷ್ಟಿಯಾದರೆ ಲಾವಣಿ ಇತ್ತೀಚಿನ ಸೃಷ್ಟಿಯಾಗಿದೆ. ಗೀತೆ ಬದುಕಿನ ಚಟುವಟಿಕೆಗಳೊಡನೆ ಕ್ರಿಯಾತ್ಮಕ ಸಂಬಂಧವನ್ನು ಪಡೆದಿದೆ. ಯಾವುದೇ ಒಂದು ಗುಂಪಿನ ಸಾಮಾನ್ಯ ಸದಸ್ಯನೂ ಕೂಡ ಇಂತಹ ಹಾಡಿನ ಕ್ರಿಯೆಯಲ್ಲಿ ಭಾಗವಹಿಸುತ್ತಾನೆ. ವಸ್ತು ಹಾಗೂ ಭಾವಕ್ಕೆ ಸಂಬಂಧಿಸಿದಂತೆ ಜನಪದ ಗೀತೆಗಳಲ್ಲಿ ಹಲವಾರು ಪ್ರಕಾರಗಳಿವೆ. ಜೋಗುಳದ ಹಾಡು, ಸೋಬಾನೆ ಹಾಡು, ಹಂತಿ ಹಾಡು, ಅಂಟಿಗೆ-ಪಂಟಿಗೆ ಹಾಡು, ಹೋಳಿ ಹಾಡು, ಬೀಸುವ ಹಾಡು, ಸುಗ್ಗಿಯ ಹಾಡು, ಕೊಲುಪದ, ಡೊಳ್ಳಿನಪದ ಹೀಗೆ ಅನೇಕ ರೀತಿಯ ಹಾಡುಗಳಿವೆ. ಕೆಲವು ಹಾಡಿನ ಮಾದರಿಗಳನ್ನು ಕೆಳಗೆ ಕೊಡಲಾಗಿದೆ.

**ಭೂದೇವಿಯ ಸ್ತುತಿ :**

ಏಳುತಾಲೇ ಎದ್ದು, ಯಾರ್ಯಾರ ನೆನೆಯಾಲೆ
ಎಳ್ಳುಜೀರಿಗೆ ಬೆಳೆಯೋಳ! ಭೂತಾಯಿ
ಎದ್ದೊಂದು ಗಳಿಗೆ ನೆನೆದೇನು!!

ಎಲ್ಲಕ್ಕೂ ನಿನ್ನ ಮೊದಲ, ನಲ್ಲೆ ನಾ ಒಲಗೊಂಬೆ
ಎಳ್ಳು ರಾಜನ್ನ ಬೆಳೆವಾಕಿ! ಭೂತಾಯಿ
ಬಲ್ಲಿದಳ ಮೊದಲ ಬಲಗೊಂಬೆ!! ಕೋ!!

**ಮಳೆ ಹಾಡು**

ರೋಣಿಯ ಮಲೆಯಾಗಿ, ಓಣೆಲ್ಲ ಜೋಳಾಗಿ
ಕಾಣಾದ ಹುಲಸು ಕುಡಿಯಾಗಿ! ಹೊಲದಾಗ
ಕಣತುಂಬ ರಾಶಿ ಹೊಳಿಯಾಗಿ!!

ಆರಿದ್ರ ಅರಗಳೆದು, ಬೀರ ಬೀಜವ ಬಿತ್ತಿ
ಅರೆಮಾಸಕ್ಕೊಮ್ಮೆ ಮಳೆ ಸುರುದು! ಬೆಳವಲಕ
ಗಿರಿಯಂತ ರಾಶಿ ಮನಿಯಾಗ!!

**ಜೋಗುಳದ ಹಾಡು**

ಹಾಲ ಬೇಡ್ಯತ್ತಾನ, ಕೋಲು ಬೇಡಿ ಕುಣಿದಾನ
ಮಸರಬೇಡಿ ಕೆಸರ ತುಳಿದಾನ! ಕಂದಯನ
ಕುಸಲದ ಗೆಜ್ಜಿ ಕೆಸರಾಯ್ತು!

ಎಲ್ಲಾರ ಇರಲೆವ್ವ ಹುಲ್ಲಾಗಿ ಬೆಳೆಯಾಲಿ
ನೆಲ್ಲಿ ಬಡ್ಯಾಗಿ ಜಿಗಿಯಾಲೆ! ಕಂದಯ್ಯ
ಜಯವಂತನಾಗಿ ಬೆಳೆಯಲಿ!!

ತೊಟ್ಟಿಲದಾಗೊಂದು ತೊಳೆದ ಮುತ್ತನ ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ! ಕಂದ್ಯೆಗ
ಮುತ್ತಿನಾ ದಿಟ್ಟಿ ತಗದೇನ!!

**ಪ್ರಶ್ನೋತ್ತರದ ಮಕ್ಕಳ ಹಾಡು**

ಕೈಯಲ್ಲೋಯ್ತು? ಕದ್ವಾಗ್ಹೋಯ್ತು!
ಕದಯೇನ್ಕೊಟ್ತು? ಚೆಕ್ಕಿ ಕೊಟ್ತು!
ಚೆಕ್ಕಿ ಏನಾಡ್ತಿ? ಒಲಿಯಾಗ್ಹಾಕ್ದೆ!
ಒಲಿ ಏನ್ಕೊಟ್ತು? ಬೂದಿಕೊಟ್ತು!
ಬೂದಿ ಏನಾಡ್ತಿ? ತಿಪ್ಪೇಗ್ಹಾಕ್ದೆ!
ತಿಪ್ಪೇನ್ಕೊಟ್ತು? ಗೊಬ್ರಾ ಕೊಟ್ತು!
ಗೊಬ್ರೇನ್ಮಾಡ್ದಿ? ಹೊಲಕ್ಹಾಕ್ದೆ!
ಹೊಲ ಏನ್ಕೊಟ್ತು? ಜೋಳಾ ಕೊಟ್ತು!
ಜೋಳಾ ಏನಾಡ್ದಿ? ಕುಂಬಾರ್ಗ ಕೊಟ್ಟೆ!
ಕುಂಬಾರೇನ್ಕೊಟ್ಟ? ಗಡಗಿ ಕೊಟ್ಟ!
ಗಡಗಿ ಏನಾಡ್ದಿ? ಬಾಂವ್ಯಾಗ್ಬಿಟ್ಟೆ!
ಬಾಂವೇನ್ಕೊಟ್ತು? ನೀರ್ಕೊಟ್ತು!
ನೀರೇನ್ಮಾಡ್ದಿ? ಗಿಡಕ್ಹಾಕ್ದೆ!
ಗಿಡ ಏನ್ಕೊಟ್ತು? ಹೂವ್ಕೊಟ್ತು!
ಹೂವೇನಾಡ್ದಿ? ದೇವರಿಗೇರಿಸ್ದೆ!
ದೇವ್ರೇನ್ಕೊಟ್ಟ? ಗಂಟಿ ಕೊಟ್ಟ!
ಗಂಟಿ ಏನಾಡ್ದಿ? ಗುಲಾಮ್ಗ ಕೊಟ್ಟೆ!
ಗುಲಾಮೇನ್ಕೊಟ್ಟ? ಸಲಾಮ್ಕೊಟ್ಟ!!

**ಸಂಬಂಧದ ಹಾಡು**

ಹಾಲುಂಡ ತವರೀಗೆ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ! ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ!!

ಅಕ್ಕತಂಗೆರು ಮೇಲ, ಮುತ್ತು ಮಾಣಿಕ ಮೇಲ
ಉತ್ತುರಿ ಸಾತಿ ಮಳೆ ಮೇಲ! ನನತಮ್ಮ
ನೀ ಮೇಲ ನನ್ನ ಬಳಗಾಕ !!

**ದಾಂಪತ್ಯದ ಹಾಡು**

ಹಚ್ಚಡದ ಪದರಾಗ, ಅಚ್ಚ ಮಲ್ಲಿಗಿ ಹೂವ
ಬಿಚ್ಚಿ ನನಮ್ಯಾಲ ಒಗೆವಂಥ! ರಾಯರನ
ಬಿಟ್ಯಾಂಗ ಬರಲೆ ಹಡದವ್ವ!!

ಮಡದೀನ ಬಡದಾನ ಮನದಾಗ ಮರಗ್ಯಾನ
ಒಳಗ್ಹೋಗಿ ಸೆರಗ ಹಿಡಿಯೂತ! ಕೇಳ್ಯಾನ
ನಾ ಹೆಚ್ಚೊ ನಿನ್ನ ತವರ್ಹೆಚ್ಚೊ!!

ಮೇಲಿನ ಹಾಡುಗಳಲ್ಲಿ ಬಳಸಿರುವ ಭಾಷೆ ಸಹಜವಾದ ಗ್ರಾಮೀಣರ ಬದುಕಿನಲ್ಲಿ ಬಳಸುವಂಥ ದಿನನಿತ್ಯದ ಸಂಪರ್ಕ ಭಾಷೆ. ತನಗೆ ತಾನೇ ಅರ್ಥವನ್ನು ಬಿಚ್ಚಿಬಿಡುವ ಆಕರ್ಷಣೆ ಈ ತ್ರಿಪದಿಗಳಿಗಿದೆ. ಸಾಮಾನ್ಯವಾಗಿ ಎಲ್ಲ ಜನಪದ ಗೀತೆಗಳಲ್ಲಿ ಜನಪದರು ತಮ್ಮ ಸಾಮಾಜಿಕ ಹಾಗೂ ವೈಯಕ್ತಿಕ ಬದುಕಿನ ಅನುಭವಗಳನ್ನೇ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಆದರ್ಶ, ಕಲ್ಪನೆ, ನೀತಿ ಮುಂತಾದ ಅನೇಕ ವಸ್ತುಗಳನ್ನೊಳಗೊಂಡ ಈ ಹಾಡುಗಳು ವಿಷಯದ ದೃಷ್ಟಿಯಿಂದಲೂ ವೈವಿಧ್ಯಮಯವಾಗಿವೆ. ಹಾಡುಗಳಲ್ಲಿ ಬಳಕೆಯಾಗಿರುವ ಶಬ್ದ ರೂಪಗಳು ಕೇವಲ ಪದಗಳಾಗಿರದೆ, ಅವಕ್ಕೆ ತಮ್ಮದೇ ಜೀವಶಕ್ತಿ ಇದೆ. ಹಾಲುಂಡ ತವರು, ಅಚ್ಚಮಲ್ಲಿಗಿ ಹೂವ, ಓಣೆಲ್ಲ ಜೋಳಾಗಿ, ಕುಸಲದ ಗೆಜ್ಜೆ, ಜಯವಂತನಾಗಿ, ತೊಳೆದ ಮುತ್ತು; ಹೀಗೆ ಅನೇಕ ರೂಪಗಳು ಬಳಕೆಯಾಗಿವೆ. ಅವಕ್ಕೆಲ್ಲ ತಮ್ಮದೇ ಆದ ಅರ್ಥವಿರುವುದರಿಂದ ಹಾಡಿನ ಒಟ್ಟು ಶಿಲ್ಪಕ್ಕೆ ಮೆರಗನ್ನು ಕೊಡುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಜನಪದ ಗೀತೆಗಳಲ್ಲಿ ಬಳಕೆಯಾಗುವ ಪದಗಳು ಭಿನ್ನವಾಗಿರುತ್ತವೆಯಾದರೂ ಮೂಲ ಸಂವೇದನೆ ಒಂದೇ ಆಗಿರುತ್ತದೆ. ಪ್ರದೇಶ ಹಾಗೂ ಸಂಪ್ರದಾಯಗಳಿಗನುಗುಣವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಗೀತ ಪ್ರಕಾರಗಳನ್ನು ಗುರುತಿಸಬಹುದು. ಉದಾಹರಣೆಗೆ ಅಂಟಿಗೆ - ಪಂಟಿಗೆ ಹಾಡುಗಳು ಶಿವಮೊಗ್ಗ ಜಿಲ್ಲೆಯ ಒಕ್ಕಲಿಗ ಕುಟುಂಬಕ್ಕೆ ಮೀಸಲಾದಂತೆ, ಹೋಳಿ ಹಾಡುಗಳು ಉತ್ತರ ಕರ್ನಾಟಕದ ವಿಶಿಷ್ಟ ಹಾಡುಗಳಾಗಿವೆ. ಜನಪದ ಗೀತೆಗಳು ವಿಷಯವೈವಿಧ್ಯತೆಯಿಂದಲೂ ಸಂಗೀತ ಗುಣಗಳಿಂದಲೂ ವಿಶಿಷ್ಟ ಜಾನಪದ ಪ್ರಕಾರವಾಗಿವೆ.

## 9.4 ಲಾವಣಿ

ಲಾವಣಿ ಘಟನಾಪ್ರಧಾನವಾದ ಒಂದು ಹಾಡುಗತೆ. ಇದು ಕಾಲ ಮತ್ತು ಸ್ಥಳಕ್ಕೆ ಅನುಗುಣವಾಗಿ ವ್ಯತ್ಯಾಸ ಹೊಂದಿದರೂ ಮೂಲಭೂತ ಲಕ್ಷಣವನ್ನು ಸ್ಥಿರವಾಗಿ ಉಳಿಸಿಕೊಂಡು ಬರುತ್ತದೆ. ಸ್ವಾತಂತ್ರ್ಯದ ಅಗತ್ಯತೆಯನ್ನು ಬಿಂಬಿಸುವ ವಸ್ತುವನ್ನು ಹೊಂದಿದ ಲಾವಣಿಗಳು, ದೇಶಕ್ಕಾಗಿ ಹೋರಾಡಿ ಮಡಿದ ವ್ಯಕ್ತಿಗಳ ಧೀರ ವ್ಯಕ್ತಿತ್ವವನ್ನು ಕೊಂಡಾಡುತ್ತಿದ್ದವು. ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ ಮುಂತಾದವರ ಲಾವಣಿಗಳು ಅತ್ಯಂತ ಜನಪ್ರಿಯ ವಾಗುವುದರ ಜೊತೆಗೆ ಜನಗಳಿಗೆ ಕೆಚ್ಚನ್ನು ನೀಡುತ್ತಿದ್ದವು. ಮುಂದೆ ಇಂತಹ ಲಾವಣಿಗಳು ಸಾಮಾಜಿಕ ವಸ್ತು ವನ್ನೊಳಗೊಳ್ಳಲು ಪ್ರಾರಂಭಿಸಿದವು. ಸಮ್ಮತ್ ಸಾಹೇಬರು ರಚಿಸಿ ಹಾಡುತ್ತಿದ್ದ ಚಾದುರ್ಗಿ, ಮೂಗೂರು ಮಲ್ಲಪ್ಪನವರು ಹಾಡುತ್ತಿದ್ದ ಜೋಗು ಜಲಪಾತದ ಲಾವಣಿಗಳು ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ. ಲಾವಣಿಯ ಶಿಲ್ಪದ ಮಾದರಿಗಾಗಿ ಸಂಗೊಳ್ಳಿ ರಾಯಣ್ಣನ ಲಾವಣಿಯ ಕೆಲಸಾಲುಗಳನ್ನು ಕೆಳಗೆ ಕೊಡಲಾಗಿದೆ.

**ಪಲ್ಲಾ**

ಸಂಗೊಳ್ಳಿ ರಾಯನಾಯಕಾ ಸಜ್ಯಾ
ಸಂಪಗಾಂವಿ ಸುಭೆಯದಾರನ ಮ್ಯಾಗ
ತಳ್ಳಿ ಮಾಡತಾನೊ ಪುಂಡಾ
ವತ್ತರದಿಂದ ಸುತ್ತಿದ ಹಳ್ಳಿ ಮುತ್ತಿಗಿ ಹಾಕಿ ಬಡೆದಾರಣ್ಣಾ
ಗೊತ್ತ ಇಲ್ಲದ ಹಾಂಗೆ ಹೋತ್ಯೊ ಬಂಡಾ.

**1 ನೆಯ ನುಡಿ**

ಪೂರ್ವದ ಮಾತ ಹೇಳತೆವ ನಿಮಗ
ಸರ್ವರು ಕುಂತು ಕೇಳಿರಿ ವಿಸ್ತಾರಾ

ಗರ್ವ ಬಂತ ಸಂಗೊಳ್ಳಿ ಕುಲಕರ್ಣಿಗೆ
ಚಂದದಿಂದ ರಾಯನಾಯಕ ಹೊಂದಿಕೊಂಡ ಇದ್ದ
ಅವರ ಮುಂದ ಹುಟ್ಟಿತಲ್ಲೆ ಕದನ ಬ್ಯಾಗಿ

ಕುಲಕರ್ಣಿಬಾಳಪ್ಪ ರಾಯಣ್ಣಾ ಜಳಕಾ ಮಾಡುಹೊತ್ಯಾಗ
ಧೋತರಸೆಳ ಅಂತ ಕೊಟ್ಟನವನ ಕೈಗಿ
ಇಷ್ಟು ಮಾತಿಗೆ ಶಿಟ್ಟ ಮಾಡಿ ಧಿಟ್ಟತಾನ ಹಿಡಿದು
ರಾಯಣ್ಣಾ ಮುಟ್ಟಾಕಿಲ್ಲಂದರವೀಯೆಂದಂದಿಗಿ

ಯಾಕಲೆ ಹಳಬಾ ಜೋಕ್ಯಾಗಿದ್ದಿ
ಸೊಕ್ಕ ಬಂತೀಗೇನೊ ನಿನಗ
ದಿಗರಾಡ್ತ ನಿಂತ ಇದರಿಗಿ

ಕೇಳಿ ರಾಯಣ್ಣಾ ತಾಳಿ ಸಿಟ್ಟು
ಹೋಳಿ ಆಡ್ತಿನ್ನ ಬಿಡುವೇನೆಂದು
ಹೇಳಿ ಹೊಂಟ ಹಿಂದಕ ತಿರಿಗಿ
ವಳ್ಳಿದೋ ಬಾಳಣ್ಣಾ ನನ್ನ ತಳ್ಳಿ ಮಾತರ ಹಿಡಿಯೊ
ಇನ್ನ ದಾಳಿ ಬಂತ ತಿಳಿಯೊ ಸುತ್ತಿ ನ್ಹಳ್ಳಿಗೆ

ಹೀಗೆ 'ಲಾವಣಿ' ಘಟನೆಗಳನ್ನು ವಿವರಿಸುತ್ತಾ ಮುಂದುವರಿಯುತ್ತದೆ. ಲಾವಣಿಗಳು ಸರಳವಾಗಿ ಘಟನೆಯನ್ನು ವಿವರಿಸುತ್ತಾ ಹೋಗುವುದರ ಜೊತೆಗೆ ನಡೆದ, ಅಥವಾ ನಡೆಯಬೇಕಾದ ಘಟನೆಯ ಸರಪಳಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಜೋಡಿಸುತ್ತಾ ಹೋಗುತ್ತವೆ. ಮೇಲಿನ ಲಾವಣಿಯಲ್ಲಿ ಬರುವ 'ಹೋಳಿ ಆಡ್ತಿನ್ನ ಬಿಡುವೇ ನೆಂದು ಹೇಳಿ ಹೊರಟ' ಎನ್ನುವ ರೂಪ ಮುಂದೆ ನಡೆಯುವ ಘಟನೆಯ ಪೀಠಿಕೆಯಂತೆ ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ಘಟನಾವಳಿಗಳ ಸರಪಳಿ ಹೆಣೆಯುತ್ತಾ ಹೋಗುವ ಕಥನಗೀತೆ ಲಾವಣಿಯಾಗುತ್ತದೆ.

## 9.5 ಗಾದೆ

ಜನಸಾಮಾನ್ಯರ ನುಡಿಯಲ್ಲಿ ಹಾಸುಹೊಕ್ಕಾಗಿ ಬಳಕೆಯಾಗುವ ಗಾದೆ, ಅವರ ಬದುಕಿಗೆ, ಅಭಿವ್ಯಕ್ತಿಗೆ ಹೆಚ್ಚು ಕ್ರಿಯಾಶೀಲತೆಯನ್ನು ತಂದುಕೊಟ್ಟಿದೆ. ಗ್ರಾಮೀಣರ ಬದುಕಿನಲ್ಲಿ, ಅವರ ಮಾತುಗಳಲ್ಲಿ ಪದೇ ಪದೇ ಬಳಕೆಯಾಗುವ ಗಾದೆ ಮಾತುಗಳು ಅವರ ಅನುಭವಸಾಂದ್ರತೆಗೆ, ಅಭಿವ್ಯಕ್ತಿ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿವೆ. ಗಾದೆಗಳನ್ನು

ಗ್ರಾಮೀಣರು ನಾಣ್ನುಡಿ ಎಂದೂ ಕರೆಯುತ್ತಾರೆ. ಸಂಸ್ಕೃತದಲ್ಲಿ ದೊರೆಯುವ ಸುಭಾಷಿತಗಳಂತೆ, ಗಾದೆಗಳೂ ಕೂಡ ಪದ್ಯಖಂಡಗಳಂತೆ ಬಳಕೆಯಾಗುತ್ತವೆ. ಗಾದೆಯನ್ನು ಜನಜೀವನದ ಸತ್ವ ಮತ್ತು ತತ್ವ ಎಂದು ಕೆಲವರು ಗುರುತಿಸುತ್ತಾರೆ, ಮತ್ತೆ ಕೆಲವರು ಗಾದೆಯೆಂದರೆ 'ಸತ್ಯವಿರಬಹುದಾದುದನ್ನು ಅಥವಾ ನೀತಿ ಬೋಧೆಯನ್ನು ವ್ಯಕ್ತಪಡಿಸುವ ವಾಡಿಕೆಯ ಚಿಕ್ಕ ವಾಕ್ಯಗಳು' ಎನ್ನುತ್ತಾರೆ. ಗಾದೆ ಅನುಭವದಿಂದಲೇ ರೂಪಿತವಾದ ಮಾತಾದ್ದರಿಂದ ಅನುಭವವೇ ಒರೆಗಲ್ಲಾಗಿ, ಸಾಕ್ಷಿಯಾಗಿ ನಿಲ್ಲುತ್ತದೆ. ನಿರ್ದಿಷ್ಟ ಸಂದರ್ಭದಲ್ಲಿ ರೂಪಗೊಂಡ ಯೋಗ್ಯ ನಿರ್ಣಯಗಳೇ ಮಾತಿನಲ್ಲಿ ಅಭಿವ್ಯಕ್ತಗೊಂಡಿರುತ್ತವೆ.ಆದ್ದರಿಂದ ಇವು ಮಾನವನ ಬುದ್ಧಿ ಮತ್ತೆಯ ಪ್ರತೀಕಗಳಾದಂತೆ ಆಲೋಚನೆಯ ದೀಪಿಕೆಗಳೂ ಆಗುತ್ತವೆ.

ಗಾದೆಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸುತ್ತಾರೆ. (1) ಬಾಯಿಂದ ಬಾಯಿಗೆ ಬಂದ ಗಾದೆಗಳು. (2) ಗ್ರಂಥಸ್ಥಗಾದೆಗಳು. ಬಾಯಿಂದ ಬಾಯಿಗೆ ಬಂದ ಗಾದೆಗಳು ಜನಸಾಮಾನ್ಯರ ಬಿಡಿಕವಿತೆಗಳಂತೆ ಕಾಣುತ್ತವೆ. ಗ್ರಂಥಸ್ಥಗಾದೆಗಳು ಗ್ರಂಥಗಳಲ್ಲಿ ಮಾತ್ರ ಕಂಡುಬರುತ್ತವೆ. ಶ್ರೀಸಾಮಾನ್ಯನಿಂದ ರಚಿತವಾದ ಜನಪ್ರಿಯ ಗಾದೆಗಳಂತೆ, ವಿದ್ಯಾವಂತರಿಂದ ರಚಿತವಾದ ಸಾಹಿತ್ಯಕ ಗಾದೆಗಳೂ ಇವೆ. ವಿದ್ಯಾವಂತ ಬರೆದ ಸಾಹಿತ್ಯಕ ಗಾದೆ ನಾಗರಿಕ ಮನಸ್ಸಿನ ತುಡಿತವನ್ನು ಬಿಂಬಿಸಿದರೆ, ಗ್ರಾಮೀಣರು ನುಡಿದ ಜನಪ್ರಿಯ ಗಾದೆಗಳಲ್ಲಿ ಗ್ರಾಮೀಣ ಮನಸ್ಸಿನ ಚಿತ್ರಣ ಬಿಂಬಿತವಾಗಿದೆ. ಜನಪ್ರಿಯ ಗಾದೆಗಳು ಸಮಯ ಸ್ಫೂರ್ತಿಯಿಂದ ಮೂಡಿ ಬಂದ ಚಿಲುಮೆಗಳಾಗಿದ್ದರೆ, ಸಾಹಿತ್ಯಕ ಗಾದೆಗಳು ಪ್ರಜ್ಞಾಪೂರ್ವಕ ಬರಹಗಳಾಗಿ ಕಂಡುಬರುತ್ತವೆ. ಜಗತ್ತಿನ ಎಲ್ಲ ಜನಾಂಗಗಳಲ್ಲಿ ಗಾದೆಗಳು ಬಳಕೆಯಾಗುತ್ತಿವೆ. ಹಾಗಾಗಿ ಗಾದೆಗಳಲ್ಲಿ ಸಾಮ್ಯತೆ ಮತ್ತು ಸಾರ್ವತ್ರಿಕತೆ ಕಂಡುಬರುತ್ತದೆ. ಬೇರೆ ಬೇರೆ ಭಾಷೆಗಳಲ್ಲಿ ಬಂದಿರುವ ಗಾದೆಗಳನ್ನು ಗಮನಿಸಿದಾಗ ಭಾಷೆ ಬೇರೆ ಎನಿಸಿದರೂ ಭಾಷಿತ ಒಂದೇ ಆಗಿದೆ ಎನಿಸುತ್ತದೆ.

**ಕೆಲವು ಗಾದೆಗಳ ಮಾದರಿಗಳನ್ನು ನೋಡಿ :**

1. ಅವ್ವನಂತೆ ಮಗಳು ನೂಲಿನಂತೆ ಸೀರೆ
2. ತಾ ಹಿಡಿದ ಮೊಲಕ್ಕೆ ಮೂರು ಕೊಂಬು
3. ಅತಿ ಆಸೆ ಗತಿ ಕೆಡುಸ್ತು
4. ಕಡ ಹುಟ್ಟಿ ಬಡವ ಕೆಟ್ಟ
5. ಆಡಕೆಗೆ ಹೋದ ಮಾನ ಆನೆ ಕೊಟ್ಟರೆ ಬರುತ್ತದೆಯೆ
6. ಮದುವೆ ಮಾಡಿ ನೋಡು ಮನೆ ಕಟ್ಟಿ ನೋಡು
7. ಹಾಸಿಗೆ ಇದ್ದಷ್ಟು ಕಾಲು ಚಾಚು
8. ಬಾಯಿದ್ದವ ಬರದಾಗೆ ಬದುಕಿದ
9. ಕಾಣದೂರಿಗ್ಮೆ ನಾಲಗೆಯೇ ದಾರಿ
10. ಕುಂಬಳಕಾಯಿಕಳ್ಳ ಎಂದರೆ ಹೆಗಲು ಮುಟ್ಟಿನೋಡಿಕೊಂಡ
11. ಗಂಜಿ ಕುಡಿಯುವವನಿಗೆ ಮೀಸೆ ಹಿಡಿಯುವವನೊಬ್ಬ
12. ಬೊಗಳುವ ನಾಯಿ ಕಚ್ಚುವುದಿಲ್ಲ
13. ಬೆಳ್ಳಗಿರುವುದೆಲ್ಲ ಹಾಲಲ್ಲ
14. ನಾಯಿ ಬೊಗಳಿದರೆ ದೇವಲೋಕ ಹಾಳೆ?
15. ಮಾತು ಮನೆ ಕೆಡಿಸ್ತು, ತೂತು ಒಲೆ ಕೆಡಿಸ್ತು
16. ಬಗ್ಗಿದ ಬೆನ್ನಿಗೆ ಬಂಡೆ ಹೇರಿದರು
17. ಅಕ್ಕರೆಯಿಲ್ಲದ ಉಪ್ಪರಿಗೆಗಿಂತ ಅಕ್ಕರೆಯಿರುವ ತಿಪ್ಪೆಲೇಸು
18. ಸಾಯ್ತೀನಿ ಸಾಯ್ತೀನಿ ಅಂತ ಸಾವಿರ ಕೋಳಿ ತಿಂದನಂತೆ
19. ಮಗಳನ್ನು ಹೆತ್ತು ಅಳಿಯನಿಗೆ ಕೊಟ್ಟೆ, ಮಗನನ್ನು ಹೆತ್ತು ಸೊಸೆಗೆ ಕೊಟ್ಟೆ
20. ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ

ಹೀಗೆ ಸಾವಿರಾರು ಗಾದೆಗಳು ಜನರಿಂದ ಸೃಷ್ಟಿಯಾಗಿ, ಅವರ ದಿನದ ವ್ಯವಹಾರದಲ್ಲಿ ಬಳಕೆಯಾಗುತ್ತಿದೆ. ಈ ಎಲ್ಲ ಗಾದೆಗಳು ವಸ್ತುಸಮಾಜ, ಮತ್ತು ಜನಜೀವನ ಆಗಿದೆ. ಗಾದೆಯ ರಚನೆ ಸಾಮಾನ್ಯವಾಗಿ ನಾಲ್ಕು ಗುಣಗಳನ್ನು ಹೊಂದಿರುತ್ತದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅವೆಂದರೆ (1) ಸಂಕ್ಷಿಪ್ತತೆ (2) ವಿವೇಕ ಪೂರ್ಣತೆ (3) ಸಂವೇದನಾಶೀಲತೆ (4) ತೀಕ್ಷ್ಣತೆ ಮತ್ತು ಜನಪ್ರಿಯತೆ. ಇವಲ್ಲದೆ ಎಲ್ಲ ಗಾದೆಗಳನ್ನೂ ದೊರೆಯುವ ಸಾಮಾನ್ಯ ಲಕ್ಷಣವೆಂದರೆ ಸಮತೂಕವನ್ನು ಕಾಯ್ದುಕೊಂಡಿರುವುದು. ಯಾವುದೇ ಗಾದೆಯನ್ನು ನೋಡಿದರೂ ತಟ್ಟನೆ ಒಂದು ಅನುಭವವನ್ನು ಅಥವಾ ನೀತಿಯನ್ನು ಸಾರಿಬಿಡುವ ಗುಣ ಅದಕ್ಕಿರುತ್ತದೆ. ಯಾವುದೋ ಒಬ್ಬ ವ್ಯಕ್ತಿಯ ಅನುಭವದ ಅಭಿವ್ಯಕ್ತಿಯಾಗಿ ಸಮಾಜದ ಮನ್ನಣೆ ಪಡೆದಾಗ ಗಾದೆಗೆ ಬೆಲೆ ಬರುತ್ತದೆ.
ಹಾಗಾಗಿ ಗಾದೆಗಳು ಜ್ಞಾನದ ಆಗರವಾಗಿರುವುದರ ಜೊತೆಗೆ ಅನುಭವ ಸಾಗರವೂ ಆಗಿರುತ್ತವೆ. ಒಂದೇ ಅನುಭವ ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ತೆರನಾಗಿ ಅನುಭವವಾದರೆ ಆ ಎಲ್ಲ ಅನುಭವಗಳ ಸಾರರೂಪವಾಗಿ ಒಂದು ಗಾದೆ ಮೂಡುತ್ತದೆ. ಉದಾಹರಣೆಗೆ ಪ್ರೀತಿ ಇಲ್ಲದ ಸಂಬಂಧದಲ್ಲಿ ದೊರೆಯುವ ಅನಾದರಕ್ಕಿಂತ ಪ್ರೀತಿ ದೊರೆಯುವ ಆದರ ಎಲ್ಲಿಯಾದರೂ ಸರಿ ಅದಕ್ಕೆ ಬೆಲೆ ಇದೆ ಎಂಬ ಅನಿಸಿಕೆ ವ್ಯಕ್ತಿಗಳ ಮನಸ್ಸಿನಲ್ಲಿ

ಮೂಡಿದರೆ ಸರಿ ಅದು ವಿವಿಧ ರೂಪವಾಗಿ ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ಗಾದೆಗಳು ಬೇರೆ ಬೇರೆ ಅನುಭವಗಳನ್ನು ಕ್ರೋಢೀಕರಿಸಿ ಒಂದು ಅಥವಾ ಅನೇಕ ಸೂತ್ರರೂಪದ ನುಡಿಗಟ್ಟುಗಳಾಗುತ್ತವೆ.



## 9.6 ಒಗಟು

ಒಗಟು, ಗಾದೆಗಳಂತೆ ವಾಕ್ ಪರಂಪರೆಗೆ ಸೇರಿದ ಜನಪ್ರಿಯ ಪ್ರಕಾರ. ಒಗಟು ಎಂದರೆ ಸಮಸ್ಯಾತ್ಮಕ ಅಭಿವ್ಯಕ್ತಿ ಎಂನು ಕರೆಯಬಹುದಾದರೂ, ಸಮಸ್ಯೆಯೇ ಒಗಟಿನ ಮೂಲ ಲಕ್ಷಣವಾಗದಿರಬಹುದು. ಒಗಟು ಎಂಬುದು ಒಗೆ ಅಥವಾ ಎಸೆ ಎಂಬರ್ಥದಲ್ಲಿ ಬಳಕೆಯಾಗಿರಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಮತ್ತು ಕೆಲವರು 'ಒಗಟು ಎಂದರೆ ಗೂಢಾರ್ಥದ್ಯೋತಕವಾದ, ಸಾಂಕೇತಿಕತೆ, ಪ್ರತಿಮೆ, ರೂಪಕ, ಇಲ್ಲವೆ ರೂಪಕ ಸರಮಾಲೆ ಹೊಂದಿದ, ಅನ್ಯೋಕ್ತಿಪ್ರಧಾನವಾದ, ಉಪಮಾನವಾಚ್ಯ - ಉಪಮೇಯ ಗೌಪ್ಯವಾದ, ಉತ್ತರಾಪೇಕ್ಷಿಯಾದ, ಚಿಂತನಶೀಲ ಪರಂಪರಾಗತ ಅಭಿವ್ಯಕ್ತಿ. ಅದರಿಂದ ಹಾಸ್ಯ ವಿನೋದ, ವಿಡಂಬನೆಗಳ ಪ್ರಯೋಜನವಾಗುವುದರ ಜೊತೆಗೆ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಲು, ಕಲ್ಪನೆಯನ್ನು ರೂಢಿಸಿಕೊಳ್ಳಲು ಸಹಕಾರಿಯಾಗಿತ್ತದೆ' ಎಂನು ಹೇಳಬಹುದು. ಒಗಟುಗಳು ಸಾಮಾನ್ಯವಾಗಿ ಬುದ್ಧಿಪ್ರಧಾನವಾದವುಗಳು. ಊಹೆಯ ಮೇಲೆ ಉತ್ತರವನ್ನು ಹುಡುಕುವ, ರಹಸ್ಯಾರ್ಥಗಳನ್ನು ಭೇದಿಸುವ ಅವಕಾಶ ಒಗಟುಗಳಿಂದ ದೊರೆಯುತ್ತದೆ. ಜನಸಾಮಾನ್ಯರ ಕಲ್ಪನಾ ಪ್ರತಿಭೆಯಿಂದ ಹುಟ್ಟಿರುವ ಒಗಟುಗಳು ರೂಪಕ, ಸಂಕೇತಗಳನ್ನೊಳಗೊಂಡು ಪ್ರಾಸಬದ್ಧ ರಚನೆಗಳಾಗಿರುವುದರಿಂದ ಕಾವ್ಯಕ್ಕೆ ಸಮೀಪವಾಗಿವೆ. ಅಲ್ಲದೆ ಶ್ಲೇಷ, ಪ್ರಾಸಬದ್ಧತೆ, ರಚನಾತ್ಮಕ ಸಮತೋಲನ ಹಾಗೂ ಅಲಂಕಾರಿಕ ಭಾಷೆಯಿಂದ ಕೂಡಿರುವ ರಸಾತ್ಮಕ ಹಾಗೂ ಧ್ವನಿಪೂರ್ಣವಾದ ಹೇಳಿಕೆಗಳಂತೆ ತೋರುತ್ತವೆ. ಒಗಟಿನ ಗುರಿ ಎಂದರೆ ಶಾಬ್ದಿಕ ಸಂಕೇತದಲ್ಲಿ ಅಡಗಿರುವ ಅರ್ಥವನ್ನು ಹುಡುಕಲು ಪ್ರೇರಣೆ ನೀಡುವುದೇ ಆಗಿದೆ. ಗೀತೆಗಳಂತೆ ಒಗಟುಗಳು ವ್ಯಕ್ತಿಯ ಭಾವಪ್ರಪಂಚಕ್ಕೆ ಸೇರಿರದೆ ಬುದ್ಧಿಯ ಪ್ರಪಂಚಕ್ಕೆ ಸೇರಿದವುಗಳಾಗಿವೆ. ಅನೇಕ ಸಂದರ್ಭಗಳಲ್ಲಿ ಒಗಟನ್ನು ಒಡ್ಡುವವನು ಹೇಳಿದ ಧಾಟಿಯಲ್ಲಿಯೇ ಒಗಟಿನ ಅಂತರ್ಗತ ಅರ್ಥ ಅಡಗಿಕೊಂಡಿರುತ್ತದೆ. ಧ್ವನಿ ಕಾವ್ಯದ ಜೀವಾಳುವಾದಂತೆ ಒಗಟಿನ ಜೀವಾಳವೂ ಆಗಿದೆ. ಗಾದೆಯಲ್ಲಿ ಕಂಡುಬರುವಂತೆ ಒಗಟಿನಲ್ಲಿಯೂ ಉಪಮಾನ ಮತ್ತು ಉಪಮೇಯಗಳ ಕಮವಾದ ಸಂಯೋಜನೆ ಇರುತ್ತದೆ. ಉಪಮೇಯ ವರ್ಣನೆ ಮಾಡಿಸಿ ಕೊಳ್ಳುವ ವಸ್ತುವಿನ ಬಗೆಗೆ ಹೇಳಿದರೆ, ಉಪಮಾನ ಆ ವಸ್ತುವನ್ನು ವರ್ಣಿಸುತ್ತದೆ. ಒಗಟಿನಲ್ಲಿ ಉಪಮಾನ, ವಾಚ್ಯ ವ್ಯಕ್ತ ಮತ್ತು ಸ್ಪಷ್ಟವಾಗಿರುತ್ತದೆ. ಆದರೆ ಉಪಮೇಯ ಸೂಚ್ಯ ಅವ್ಯಕ್ತ ಮತ್ತು ಅಸ್ಪಷ್ಟವಾಗಿರುತ್ತದೆ ಉಪಮಾನದಿಂದ ಉಪಮೇಯ ಕಂಡುಹಿಡಿಯುವುದೇ ಒಗಟಿನ ರಹಸ್ಯ.

ಒಗಟುಗಳಲ್ಲಿ ಅವುಗಳ ಅರ್ಥ ಮತ್ತು ರಚನೆಗನುಗುಣವಾಗಿ, ಪ್ರಮುಖವಾದ ಮೂರು ಪ್ರಕಾರಗಳಿವೆ. (1) ರೂಪ ಪ್ರಧಾನ ಒಗಟು (2) ಕ್ರಿಯಾ ಪ್ರಧಾನ ಒಗಟು (3) ಅರ್ಥ ಪ್ರಧಾನ ಒಗಟು. ಇವಲ್ಲದೆ ಒಗಟುಗಳನ್ನು ಅವುಗಳ ರಚನೆಗನುಗುಣವಾಗಿ ಕರ್ತೃ ಪ್ರಧಾನ ಒಗಟುಗಳು, ಕರ್ಮ ಪ್ರಧಾನ ಒಗಟುಗಳು ಹಾಗೂ ಕರ್ತೃ ಸಂಬಂಧ ಕ್ರಿಯಾ ಪ್ರಧಾನ ಒಗಟುಗಳೆಂದೂ ಗುರುತಿಸಬಹುದು. ಸಾಮಾನ್ಯವಾಗಿ ಒಗಟುಗಳಲ್ಲಿ ಕ್ರಿಯಾ ಪ್ರಧಾನವಾದ ಒಗಟುಗಳೇ ಹೆಚ್ಚಾಗಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಪ್ರತಿ ನೂರಕ್ಕೆ ಎಪ್ಪತ್ತರಷ್ಟು ಕ್ರಿಯಾ ಪ್ರಧಾನ ಒಗಟುಗಳಿರುತ್ತವೆ ಎಂದು ಕೆಲವರು ಗುರುತಿಸಿದ್ದಾರೆ.

### 9.6.1 ರೂಪಪ್ರಧಾನ ಒಗಟುಗಳು :

ರೂಪಪ್ರಧಾನ ಒಗಟುಗಳಲ್ಲಿ ನಾಮಪದಗಳಿಂದ ಕೂಡಿದ ವರ್ಣನಾತ್ಮಕವಾಕ್ಯಗಳಿರುತ್ತವೆ. ಸಾಮಾನ್ಯವಾಗಿ ಒಂದರಿಂದ ಅನೇಕ ವಾಕ್ಯಗಳಿರುತ್ತವೆ.

(1) ಕಂಬದ ಮ್ಯಾಲೆ ನಿಂಬೇಕಾಯಿ (ಲವಂಗ)

(2) ಕಾಗೆಗಿಂತ ಕಪ್ಪು ಸುಣ್ಣಕ್ಕಿಂತ ಬಿಳುಪು
ಸಮುದ್ರಕ್ಕಿಂತ ದೊಡ್ಡದು, ನೋಡಾಕೆ ಸಣ್ಣದು(ಕಣ್ಣು)

(3) ಗೇಣುದ್ದ ಹುಡುಗನಿಗೆ ಮಾರುದ್ದ ಬಾಲ (ಬಾರಿಕೋಲು)

(4) ಕಲ್ಲು ಬಸವಗೆ ಮರದ ಮುಗುದಾಣ (ಬೀಸುವ ಕಲ್ಲು)

(5) ಕೆಂಪರಾಣಿ ಸುತ್ತಲೂ ಬಿಳೀ ಸೈನಿಕರು (ನಾಲಿಗೆ ಮತ್ತು ಹಲ್ಲು)

### 9.6.2 ಕ್ರಿಯಾಪ್ರಧಾನ ಒಗಟುಗಳು

ಕ್ರಿಯಾ ಪ್ರಧಾನ ಒಗಟುಗಳಲ್ಲಿ ಕ್ರಿಯೆ ನಡೆಯುವ ವರ್ಣನೆ ಇರುತ್ತದೆ. ಸಂಕೀರ್ಣ ವಾಕ್ಯಗಳೊಡನೆ, ಸರಳ, ಖಚಿತ ನಿಷೇಧಾತ್ಮಕ ಕ್ರಿಯಾಪದಗಳ ಬಳಕೆ ಇಂತಹ ಒಗಟುಗಳ ಲಕ್ಷಣವಾಗಿರುತ್ತದೆ

(1) ಕೆಂದ ಎತ್ತು ಕೆರೆಯಾಗೆ ಈಸುತೈತಿ (ಕರಿಗೆಡಬು)

(2) ಚಳಿಜ್ವರ ಇಲ್ಲದೆ ಬೆಂಕಿ ಕಾಯಿಸುವವನಾರು? (ಕಮ್ಮಾರ)

(3) ಡೊಂಕ ಗಿಡಕ ಡೊಳ್ಳು ಕಟ್ಟೈತಿ (ಬಸುರಿ)

(4) ತಟ್ಟೇಲಿ ಆಡುತ್ತೆ
ತಮಾಷೆ ಮಾಡುತ್ತೆ
ಮುಟ್ಟಿದರೆ ಕಚ್ಚುತ್ತೆ (ಮಂಗಳಾರತಿ)

(5) ಬಾಲಾ ಹಿಡಿದರೆ ಗುರ್ ಅಂತೈತಿ (ಬೀಸುವ ಕಲ್ಲು)

(6) ಬಂಗಾರ ಬಿಡಿಸಿ ಬೆಳ್ಳಿ ತಿಂತಾರ (ಬಾಳೆಹಣ್ಣು)

## 9.6.3 ಅರ್ಥ ಪ್ರಧಾನ ಒಗಟುಗಳು

ಎಲ್ಲ ಒಗಟುಗಳಲ್ಲಿ ಅರ್ಥ ಪ್ರಧಾನತೆ ಇರುವುದಾದರೂ, ಇಲ್ಲಿ ಅರ್ಥದ ಪರಿಧಿಯನ್ನು ಹುಡುಕುವುದು ಕಷ್ಟವಾಗುವಷ್ಟು ಅರ್ಥ ಆ ರೂಪಗಳಲ್ಲಿ ಹುದುಗಿರುತ್ತದೆ.

(1) ಅಕ್ಕ ಅಕ್ಕ ಗಿಡ ನೋಡು
ಗಿಡದ ತುಂಬಾ ಕಾಯಿ ನೋಡು
ಕಾಯಿ ತಿಂದವರ ಬಾಯಿ ನೋಡು (ಯಾಲಕ್ಕಿ)

(2) ಏಳು ನೂರು, ಎಂಟು ನೂರು
ಗಂಟು ನೂರು, ಮಂಟಪ ನೂರು
ಮನೆ ನೂರು ನಾನ್ಯಾರು (ಬಲೆ)

(3) ಬಣ್ಣ ಬಣ್ಣವಿದ್ದರೂ ಗಿಳಿ ನವಿಲು ನಾನಲ್ಲ
ನಾಲಿಗೆಗಳೆರಡಿದ್ದರೂ ಉರಗ ಜಾತಿಯವನಲ್ಲ
ವಿಷ ಹೊಟ್ಟೆಯೊಳಗಿದ್ದರೂ ಕರಿಕಂಠ ನಾನಲ್ಲ
ವಿಶ್ವವ್ಯಾಪಿಯಾದರೂ ಭಗವಂತ ನಾನಲ್ಲ
ಎಲ್ಲರ ಮನೋಗತವನ್ನೆಲ್ಲಾ ತಿಳಿಸಬಲ್ಲೆ ನಾನ್ಯಾರು? (ಪೆನ್ನು)

(4) ಕುತನಿ ಕುಂಚಗಿ ರತ್ನದ ಗೊಂಡೆ
ಸಾರಂಗ ಪ್ಯಾಟಾಗೆ ಸಾರಿಕೋತ ಹೋದರ
ಸತ್ತಾವ್ರೆದ್ದು ಸಲಾಮು ಹೊಡಿತಾರ (ಕೋಳಿ)

(5) ಆರು ದಾರಿಗಳುಂಟು ಹಿರೀಕಾಯಿಯಲ್ಲ
ಒಳಗೆ ಹುಳಿ ಉಂಟು ಹುಣಸೆ ಹಣ್ಣಲ್ಲ
ಮೇಲೆ ಹಸುರುಂಟು ಲಿಂಬೆ ಹಣ್ಣಲ್ಲ (ನೆಲ್ಲಿಕಾಯಿ)

(6) ಒಳಕೋಟೆ, ಹೊರಕೋಟೆ, ಕೋಟೆ ತಾನಲ್ಲ
ಒಳಪಟ್ಲ ಹೊರಪಟ್ಲ, ಪಟ್ಲ ತಾನಲ್ಲ
ಮಧ್ಯ ಹರಳುಂಟು ಮಾಣಿಕ್ಯ ತಾನಲ್ಲ
ಹೇಳಬಲ್ಲ ಜಾಣರಿಗೆ ಒಂದುಂಡೆ ಬೆಲ್ಲ (ದಾಳಿಂಬೆ ಹಣ್ಣು)

ಮೇಲೆ ವಿವರಿಸಿದ ಒಗಟಿನ ಪ್ರಕಾರಗಳನ್ನಷ್ಟೇ ಅಲ್ಲದೆ ದ್ವಂದ್ವಾರ್ಥದ ಒಗಟುಗಳು, ಶಬ್ದಚಿತ್ರದ ಒಗಟುಗಳು, ಪದಸಮಸ್ಯೆ, ನಾಡುನುಡಿಗಳು, ಗಣಿತದ ಒಗಟುಗಳು, ಪ್ರಶ್ನೋತ್ತರ ಒಗಟುಗಳು, ಒಗಟು ಕಥೆಗಳು, ವಿಡಂಬನಾತ್ಮಕ ಒಗಟುಗಳು, ಅನ್ವಯಾರ್ಥದ ಒಗಟುಗಳು, ಶಕುನದ ಒಗಟುಗಳು,ಒಡಬು-ಒಗಟುಗಳು, ಎಂದು ಪುನ: ಅನೇಕ ಪ್ರಕಾರವಾಗಿ ವಿಂಗಡಿಸಬಹುದು.

## ಅಭ್ಯಾಸ - 1

ಪ್ರಶ್ನೆ : ಕೆಳಗೆ ಕೊಟ್ಟಿರುವ ಒಗಟುಗಳಿಗೆ ಉತ್ತರವನ್ನು ಹೇಳಿ :

(1) ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ.
ಸೂರ್ಯ ಕಿರಣಕ್ಕೂ ಅದು ಬಾಡುವುದಿಲ್ಲ.

..........................................................................................

(2) ಊಟಾ ಮಾಡುವಾಗ ಏನು ತಗದ ಊಟ ಮಾಡುತಿ?

..........................................................................................

(3) ಅಕ್ಷರಾ ಇದ್ರೂ ಪುಸ್ತಕ ಅಲ್ಲ
ಚಕ್ರ ಇದ್ರೂ ರಾಜಾ ಅಲ್ಲ
ಅದು ಇಲ್ದ ನಡಿಯೂದಿಲ್ಲ

..........................................................................................

(4) ಅಪ್ಪನ ದುಡ್ಡು ಎಣಿಸಲಾರೆ
ಅವ್ವನ ಸೀರೆ ಮಡಚಲಾರೆ

..........................................................................................

(5) ಕಟ್ಟೆ ಇಲ್ಲದ ಕೆರೆಯಲ್ಲಿ ತಟ್ಟೆ ತೇಲುತ್ತದೆ.

..........................................................................................

(6) ಕತ್ತಲ ಮನ್ಯಾಗ ಕೆಂಪ್ಯಾ ಒದ್ದಾಡತಾನ

..........................................................................................

(7) ಕೆಂಪ ಅಂಗಿ ಗಿಡ್ಡ ಹುಡುಗ ಸದ್ದಿಲ್ದ ಬರ್ತಾನ, ಮುದುಕೊಟ್ಟು ಎಚ್ಚರಿಸತಾನ

..........................................................................................

(8) ಗೂಡಿನ್ಯಾಗಿನ ಪಕ್ಷಿ ನಾಡೆಲ್ಲಾ ನೋಡತೈತಿ

..........................................................................................

(9) ನೀರಿಗಿಂತಾ ತಿಳು, ಬೇವಿಗಿಂತ ಕಹಿ, ರೆಕ್ಕೆ ಇಲ್ಲದೆ ಮ್ಯಾಲೆ ಹಾರತೀನಿ

..........................................................................................

(10) ಅಜ್ಜಿಗೆ ಮೈತುಂಬಾ ಕಜ್ಜಿ, ಜಜ್ಜಿ ತಿಂದರೆ ಬಾಳ ಸೀ

..........................................................................................

## 9.7 ಜನಪದ ಕಥೆ

ಬಾಯಿಂದ ಬಾಯಿಗೆ ಹರಿದು ಬಂದಿರುವ ಜನಪದ ಕಥೆಗಳು ಮಾನವನ ಪುರಾತನ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿವೆ. ಆದ್ದರಿಂದ ಕಥೆಗಳುಕೇವಲ ಮನರಂಜನೆಯನ್ನು ಮಾತ್ರನೀಡದೆ, ಸಾಮಾಜಿಕ, ಭಾಷಿಕ, ಚಾರಿತ್ರಿಕ, ಮನಶ್ಶಾಸ್ತ್ರೀಯ ಹಾಗೂ ಮಾನವಶಾಸ್ತ್ರೀಯ ದೃಷ್ಟಿಕೋನಗಳಿಂದ ಅವುಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತವೆ. ಆದ್ದರಿಂದ ಜಗತ್ತಿನ ಎಲ್ಲ ಭಾಷೆಗಳಲ್ಲಿ ಜನಪದ ಕಥೆಗಳನ್ನು ಸಂಗ್ರಹಿಸುವಲ್ಲಿ ವಿದ್ವಾಂಸರು ಆಸಕ್ತಿ ತೋರಿದ್ದಾರೆ. ಕಥಾ ಅಂಶ ಕೇವಲ ಗದ್ಯದಲ್ಲಿ ಮಾತ್ರ ವ್ಯಕ್ತವಾಗಿರದೆ ಕೆಲವೊಂದು ಸಂದರ್ಭದಲ್ಲಿ ಗೀತೆಗಳಲ್ಲಿಯೂ ಕಥೆ ಒಳಗೊಂಡಿರುವುದು ಕಂಡು ಬರುತ್ತದೆ. ಇಂತಹುದನ್ನೇ ಕಥನಗೀತೆಗಳೆಂದು ಕರೆಯುತ್ತಾರೆ.
ಜನಪದ ಗೀತೆಗಳನ್ನು ಪ್ರಮುಖವಾಗಿ ಎರಡು ಪ್ರಕಾರಗಳಾಗಿ ಗುರುತಿಸುತ್ತಾರೆ. ಸಂಕೀರ್ಣ ಕಥೆಗಳು ಮತ್ತು ಸರಳ ಕಥೆಗಳು. ಸಂಕೀರ್ಣ ಕಥೆಗಳಲ್ಲಿ ಅನೇಕ ಆಶಯಗಳಿರುವುದರ ಜೊತೆಗೆ ಘಟನಾವಳಿಗಳ ಸರಪಳಿ ಹಾಗೂ ಅತಿಮಾನುಷ ವಾತಾವರಣ ಇರುತ್ತದೆ. ಆದರೆ ಸರಳ ಕಥೆಗಳು ಕಡಿಮೆ ಆಶಯಗಳಿಂದ ಕೂಡಿದ ಈ ಸಣ್ಣ ಕಥೆಗಳಾಗಿರುತ್ತವೆ. ಪ್ರಾಣಿ ಕಥೆಗಳು, ವಿನೋದ ಕಥೆಗಳು, ಬುದ್ಧಿವಂತಿಕೆಯ ಕಥೆಗಳು ಹಾಗೂ ನೀತಿ ಕಥೆಗಳು ಸರಳ ಕಥೆಗಳ ಚೌಕಟ್ಟಿಗೆ ಬರುತ್ತವೆ. ಸಂಕೀರ್ಣ ಕಥೆಗಳನ್ನು ಪುನ: ಕಟ್ಟು ಕಥೆಗಳು ಮತ್ತು ವಾಸ್ತವಿಕ ಕಥೆಗಳು ಎಂದು ವಿಂಗಡಿಸುತ್ತಾರೆ. ಕಟ್ಟುಕತೆಗಳಲ್ಲಿ ಅತಿಮಾನುಷ ವಿರೋಧಿಗಳು, ಅತಿಮಾನುಷ ಸಹಾಯಕರುಮಾಂತ್ರಿಕತೆ ಮತ್ತು ಅತಿಮಾನುಷ ಅದ್ಭುತಗಳು, ಪ್ರೇಮಿಗಳು ಮತ್ತು ದಂಪತಿಗಳು ಪರೀಕ್ಷೆಗಳು ಮತ್ತು ಅನ್ವೇಷಣೆಗಳು ವಿಧೇಯತೆ, ಒಳ್ಳೆಯ ಹಾಗೂ ಕೆಟ್ಟ ಬಂಧುಗಳು, ಅತೀತ ಶಕ್ತಿಗಳು, ಮೂರು ಲೋಕಗಳು ಎಂಬುದಾಗಿ ಅನೇಕ ಅಂಶಗಳಿರುತ್ತವೆ. ಸರಳ ಕಥೆಗಳಲ್ಲಿ ಜಾಣತನ, ಮೋಸ, ವಂಚನೆ, ಕಳ್ಳತನ, ಮೊದಲಾದ ವಿಚಾರಗಳಿರುತ್ತವೆ. ಇಂತಹ ಪುರಾಣ ಕಥೆಗಳ ವಸ್ತು ಜಗತ್ತಿನ ಸೃಷ್ಟಿ - ಸ್ಥಿತಿ- ಲಯಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಒಟ್ಟಿನಲ್ಲಿ ಜನಪದ ಕಥೆಗಳಲ್ಲಿ ಅನೇಕ ಪ್ರಕಾರಗಳಿವೆ, ಅಲ್ಲದೇ ಅನೇಕ ರೀತಿಯ ವಸ್ತುಗಳನ್ನು ಒಳಗೊಂಡು ವಿವಿಧ ರೀತಿಯ ಕಥಾರೀತಿಯನ್ನು ಹೊಂದಿವೆ. ಜನಪದ ಕಥೆಗಳಲ್ಲಿಯೇ ಪ್ರಾಣಿ ಕಥೆಗಳು ಅತ್ಯಂತ ಪ್ರಾಚೀನಪ್ರಕಾರಗಳೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಮಾನವ ನಾಗರಿಕತೆಯನ್ನು ಹೊಂದುವ ಮೊದಲಿನ ಸ್ಥಿತಿಯಲ್ಲಿಯೇ ಈ ರೀತಿಯ ಪ್ರಾಣಿ ಕಥೆಗಳನ್ನು ಹೊಂದಿದ್ದ ಎಂಬುದು ಕೆಲವರ ಅಭಿಪ್ರಾಯವಾಗಿದೆ.

ಜನಪದ ಕಥೆಗಳನ್ನು ಭಾಷಿಕ ದೃಷ್ಟಿಯಿಂದ ಅಭ್ಯಸಿಸುವ ಪ್ರಯತ್ನ ಕನ್ನಡದಲ್ಲಿ ಹೆಚ್ಚಾಗಿ ನಡೆದಿಲ್ಲ. ಪ್ರಾದೇಶಿಕ, ಭೌಗೋಳಿಕ ಹಿನ್ನೆಲೆಯಲ್ಲಿ ಜನಪದ ಕಥೆಗಳಲ್ಲಿ ಬಳಕೆಯಾಗಿರುವ ಭಾಷೆಯನ್ನು ನೋಡುವ ದೃಷ್ಟಿಯಿಂದ ಕೆಲವು ಕಥೆಗಳ ಪಠ್ಯಭಾಗವನ್ನು ಇಲ್ಲಿ ಕೊಡಲಾಗಿದೆ. ಕನ್ನಡ ಭಾಷೆಯ ಪ್ರಾದೇಶಿಕ ವೈಶಿಷ್ಟ್ಯಕ್ಕೆ ಒಳ್ಳೆಯ ಉದಾಹರಣೆ ಯಾಗಬಹುದಾದ ಕಥಾ ಭಾಗಗಳಲ್ಲಿ ಬಳಕೆಯಾಗಿರುವ ಭಾಷೆ ಆಯಾ ಪ್ರದೇಶಗಳ ಭಾಷಿಕ ವೈಶಿಷ್ಟ್ಯವನ್ನೊಳ ಗೊಂಡಿದೆ.

### 9.7.1 ಸೆಟಗೊಂಡವನಿಗೆ ಆಟಗೋಲು

ಹೀಂಗ ಒಂದೂರಾಗ ಒಂದು ದೊಡ್ಡ ಮನಿ ಇತ್ತಂತ. ಆ ಮನ್ಯಾಗ ಬಾಳ ಮಂದಿ ಇದ್ರಂತ. ಅಜ್ಜ, ಅಪ್ಪ ಅವ್ವ ಮಮ್ಮಕ್ಕಳು ಮನ್ಯಾಗ ತುಂಬಿದ್ರಂತ. ಆ ಮನ್ಯಾಗ ಸಿಂಗ್ಯಾ ಅಂತ ಒಂದು ಸಣ್ಣ ಹುಡುಗ ಇತ್ತಂತ. ಸಣ್ಣ ಹುಡುಗಂತ ಆ ಮನ್ಯಾಗಿರವರೆಲ್ಲ ಅಂವ್ಗ ಬಾಳ ಅಚ್ಚಾಮಾಡತಿದ್ರಂತ. ಹೀಂಗಾಗಿ ಸಿಂಗ್ಯಾ ಬಾಳ ಹಟಮಾರಿ ಆಗಿದ್ನಂತ. ಸಾಲಿಗೆ ಹೋಗಂದ್ರ ಹೋಗತಾನ ಇದ್ದಿಲ್ಲ. ಅದನ್ನ ಇದನ್ನ ಬೇಡಿಕೊಂಡ, ಹಟಮಾಡಿಕೊಂಡ ಮನ್ಯಾಗ ಇರತಿದ್ದ. ಒಮ್ಮೆ ಆ ಊರ ಶಂಕರಲಿಂಗನ ಜ್ಯಾತ್ರಿ ಬಂತಂತ, ಆ ಜ್ಯಾತ್ರಿ ಊರ ಬಿಟ್ಟು ಬಂದ ಹರಿದಾರಿ ಇತ್ತಂತ. ಊರಾಗಿನ್ನ ಹುಡುಗುಪ್ಪಡಿ ಬಂಡಿ ಕಟಗೊಂಡು ಹೊಸಾ ಅರಿವಿ ಹಾಕ್ಕೊಂಡು ಜ್ಯಾತ್ರಿಗೆ ಹೋಗಾಕ

ತಯಾರ ಆಗಿದ್ರಂತ ಸಿಂಗ್ಯಾನ ಮನಿಯವ್ರು ಬಂಡಿಗೆ ಕೊಲ್ಲಾರಿ ಕಟ್ಟಿ, ಹೋಳ್ಗಿ ಹುಗ್ಗಿ ಬುತ್ತಿ ಮಾಡಿಕೊಂಡು ಜ್ಯಾತ್ರಿಗೆ ಹೋಗಾಕ ಸಜ್ಜಾದ್ರು. ಸಿಂಗ್ಯಾ ಹಟಾ ಮಾಡಿ ಬಂದ ಮೂಲ್ಯಾಗ ಕುಂತಬಿಟ್ಟಿದ್ದ. 'ನಂಗ ಎಲ್ಲಾ ಹುಗ್ಗಿ ಬೇಕು' ಅಂತ ಹಟ ಹಿಡ್ದ. ಯಾರು ರಂಬಿಸಿದ್ರೂ ಸುಮ್ಮಕ ಆಗಲಿಲ್ಲ. ಮೂಲ್ಯಾಗ ಬಿದ್ಕೊಂಡು ದುಕ್ಕ ದುಕ್ಕಿ ಜೋರ್ಲೆ ಅಳಾಕ ಸುರು ಮಾಡಿದ. ಮೊದ್ಲ ಆ ಹುಡುಗ ಇಲ್ಲದ ಹಟಮಾರಿ!

ಊರ ಜನರೆಲ್ಲ ಜ್ಯಾತ್ರಿ ಮುಟ್ಟಿರಬೇಕು. ಜ್ಯಾತ್ರಿಗೆ ತಡಾ ಆಗತೈತಿ - ಅಂತ ಸಿಂಗ್ಯಾನ ಮನೀ ಜನರೆಲ್ಲ ಜ್ಯಾತ್ರಿಗೆ ಹ್ವಾದ್ರು. ಸಿಂಗ್ಯಾ ಒಬ್ನ ಹಟ ಮಾಡಿಕೊಂಡ ಮೂಲ್ಯಾಗ ಕುಂತಿದ್ದ. ಒಂದು ಕೆಂಪು ಚೋಳ ಬಂತು. ಸಿಂಗ್ಯಾ ಅದನ್ನ ನೋಡಿದ್ದಿಲ್ಲ. ಅದು ಸಿಂಗ್ಯಾನ ಕಟ್ಟ ಅಂತ ಕಡೀತು' — ಸಿಂಗ್ಯಾನ ಅರ್ಭಾಟ ಹೆಚ್ಚಿತು. 'ಅಯ್ಯೋ ನನಗೆ ಚೋಳ ಕಡೀತು' ಅಂತ ಹೊಯ್ಕೊಳಾಕ ಸುರು ಮಾಡಿದ. ಅವ್ನ ಯಾರು ಕೇಳ್ಬೇಕು? ಮನ್ಯಾಗ ಒಬ್ರೂ ಇದ್ದಿಲ್ಲ. ಎಲ್ಲಾರು ಜಾತ್ರಿಗೆ ಹೋಗಿಬಿಟ್ಟಿದ್ರು. ಸಿಂಗ್ಯಾ ಸನಾದಿಯಾಂಗ ಒಂದೇ ಸವನ ಸೂರ ತಗದು ಅತಗೊಂತ ಕುಂತ.

ಒಂದು ತಾಸಿನ ಮ್ಯಾಗ ಜ್ಯಾತ್ರಿಗೆ ಹೋದವರು ತಿರುಗಿ ಬಂದ್ರು. ಸಿಂಗ್ಯಾ ಜೋರಾಗಿ ಅಳಾಕ ಹತ್ತಿದ್ದ. ಅವರಪ್ಪ ಹತ್ರ ಬಂದು 'ಯೋಕೊ ಸಿಂಗ ಯಾಕ ಅಳತೀದಿ, ನಿನ್ನ ಹಟ ದೊಡ್ಡದು' ಅಂತ ಕೇಳಿದ್ನು. 'ಯಪ್ಪಾ ನಂಗೊಂದು ಕಡೀತು' — ಅಂತ ಲಬಾ ಲಬಾ ಹೊಯ್ಕಂಡ. ಸಿಂಗ್ಯಾನ ಗೆಣೆಯಾರು ಆಗ್ಲ ಜಾತ್ರೆಯಿಂದ ತಿರುಗಿ ಬಂದಿದ್ರು. ಸಿಂಗ್ಯಾ ಹೊಯ್ಕೊಂಡಿದ್ದ ಕೇಳಿ ಅವನ ಹತ್ರ ಬಂದ್ರು. ಸಿಂಗ್ಯಾನ ಸಮಾಚಾರ ಕೇಳಿ ಬಿದ್ದು ಬಿದ್ದು ನಕ್ರು. ಸೆಟಗೊಂಡವರಿಗೆ ಆಟಗೋಲು — ಅನ್ನುತ್ತ ತಮ್ಮ ಮನೀಗೆ ಓಡಿದ್ರು. ಸಿಂಗ್ಯಾ ಇನ್ನು ಅತ್ತ ಅಳತಿದ್ದ. ಮೊದ್ಲ ಅವಂದ ಹಟಮಾರಿ ಸ್ವಭಾವ.

— (ಧಾರವಾಡ ಜಿಲ್ಲೆಯ ಜನಪದ ಕಥೆ)

**ಸೂಚನೆ :**
ಈ ಕಥೆಯಲ್ಲಿ ಬಳಕೆಯಾಗಿರುವ ಧಾರವಾಡ ಪ್ರದೇಶದ ಭಾಷೆಯನ್ನು ಗಮನಿಸಿ. ಮೈಸೂರಿನ ಪ್ರದೇಶದಲ್ಲಿ 'ಎ' ಕಾರದಿಂದ ಅಂತ್ಯಗೊಳ್ಳುವ ಕೆಲವು ನಾಮಪದಗಳು ಇಲ್ಲಿ 'ಇ' ಕಾರದಿಂದ ಅಂತ್ಯಗೊಳ್ಳುತ್ತವೆ. ಉದಾಹರಣೆಗೆ : ಮನಿ, ಜ್ಯಾತ್ರಿ, ಅರಿವಿ, ಇತ್ಯಾದಿ ಶಬ್ದಗಳು.

ಕೆಲವು ಪ್ರಾದೇಶಿಕ ವಿಶಿಷ್ಟತೆಯಿಂದ ಕೂಡಿದ ಪದಗಳು :

ಬಾಳ ಮಂದಿ = ಬಹಳ ಜನ
ಬಂಡಿ = ಗಾಡಿ
ರಂಬಿಸಿ = ಸಮಾಧಾನ ಮಾಡಿ
ಹೊಯ್ಕೊಳಾಕ = ಬಾಯಿ ಬಡಿದುಕೊಳ್ಳಲು
ಒಂದೇಸವನ = ಎಡೆಬಿಡದೆ
ಗೆಣೆಯಾರು = ಗೆಳೆಯರು
ಸೆಟಕೊ = ಸಿಟ್ಟು ಮಾಡಿಕುಳಿತುಕೋ
ಆಟಗೋಲು = ಏನೂ ಇಲ್ಲ.

## 9.7.2 ತೀಸ್ ಮಾರಖಾ - ಜಂಬದ ಕೋಳಿ

ಒಂದು ದಿನ ಅವನ ಹೆಂಡತಿ ತಮಗಿ ತಕೊಂಡು ಹೋಗಿದ್ದಳು. ಅವನು ಉಣುತ್ತ ಕುಳಿತಿದ್ದನು. ಆಗ ಅವನ ಹತ್ತಿರ ಅನೇಕ ನೊಣಗಳು ಬಂದವು. ಏಕೆಂದರೆ ಅವನು ಜಿಗಿಟ ಬೆಲ್ಲ ಮತ್ತು ರೊಟ್ಟಿ ಊಟ ಮಾಡುತ್ತಿದ್ದ. ಆಗ ಅವನು ತೀಸ್ ನೊಣಗಳನ್ನು ಕೊಂದನು. ಆಗ ಅವಳು ಬಂದಳು. ಅವಳಿಗೆ ನಾನು ನೀನು ಬರುವ ತನಕ ಊಟ ಮಾಡುತ್ತಾ ತೀಸ್ ನೊಣಗಳನ್ನು ಕೊಂದಿದ್ದೇನೆ ಎಂದು ಹೇಳಿದನು. ಅದಕ್ಕೆ ಅವಳು ತೀಸ್ ಮಾರಖಾ. ಎಂದು ಕರೆದಳು.

— (ಬೀದರ್ ಜಿಲ್ಲೆಯ ಕಥೆಗಳು)

**ಸೂಚನೆ :**
ಬೀದರ್ ಜಿಲ್ಲೆಯ ಕಥೆಗಳಲ್ಲಿ ಉರ್ದು ಭಾಷೆಯ ಪ್ರಭಾವವನ್ನು ಗಮನಿಸಿರಿ. ಕಥೆಗಳಲ್ಲಿ ಬಳಕೆಯಾಗುವ ಕೆಲವು ಪದಗಳು ಕೆಳಗಿನಂತಿವೆ.

ತಮಗಿ = ತಂಬಿಗೆ
ತೀನ್ = ಮೂರು
ಮಾಳ = ಕೊಲ್ಲು
ಚಿಡಿ = ಬಡಿ
ದುಖಾನ್ = ಅಂಗಡಿ
ದೋಸ್ತ = ಸ್ನೇಹಿತರು
ಕೋಲಿ = ಕೋಣೆ
ಖೂನ್ = ಪರಿಚಯ
ಮಚ್ಛರ್‌ದಾನಿ = ಸೊಳ್ಳೆಪರದೆ
ಕಿಲ್ಲೆ = ಗಲ್ಲಿ

ಅಂತೆಯೇ ಕೊಡಗಿನ ಜನಪದ ಕಥೆಗಳಲ್ಲಿ

ಅಂಡಮಾಡ ಚೆಟ್ಟಿಚ್ಚ, ಮಗ್ಗೆರೆ ಪೊಂಣಯ್ಯ, ಚೀಯವ್ವ, ಅಪ್ಪ, ಕೊಡ್‌ಚಿ, ಬೇಂದ್ರು ಕೋಲಪ್ಪ ಮುಂತಾದ ವ್ಯಕ್ತಿಗಳ ಹೆಸರುಗಳು ಬರುತ್ತವೆ. ಅಂತೆಯೇ ಪ್ರಾದೇಶಿಕ ವೈಶಿಷ್ಟ್ಯದಿಂದ ಕೂಡಿದ ಅನೇಕ ಪದಗಳು ಬಳಕೆಯಾಗುತ್ತವೆ.

## 9.7.3 ಮಾಣೀ ಬುದ್ಧಿ

ಒಬ್ಬ ಬಡ ಬ್ರಾಮ್ಮಣ ಇದ್ದ. ಅವನಿಗೆ ಒನ್ದ್ ದೇವ್ಸ್ಥಾನದ್ಪೂಜೆ ದಿನಮ್ಪ್ರತಿಯೂ ಆ ಬ್ರಾಮ್ಮಣ ಅರ್‌ಸನಲ್ಲಿಗೆ ಹೋಯಿ ಪ್ರಸಾದ ಕೊಟ್‌ಬರ್ಕಿತ್. ಒಸ್ದಿನ ಬ್ರಾಮ್ಮಣನಿಗೆ ಹೋಪ್‌ಕಾಯಿಲ್ಲ್ಯೆ. ಅದಕ್ಕೆ ತನ್ನ ಮಗನ ಹತ್ರ ಪ್ರಸಾದ ಕಳ್ಸಿಕೊಟ್ಟ.

ಸ್ತೂಲ ಕಾಯ್ದರ್‌ಸ ಗಂಬೀರದಲ್ಲಿ ರಾಜಸಬೆಕರ್‌ದು ಸಿಮ್ಹಾಸನದ್ಮ್ಯೆಲೆ ಕೂತಿದ್ದ. ಆಗ ಈ ಮಾಣಿ ಒಳಗೆ ಹೋಯ್ತ್ ಅರಸನೀಗ್ಪ್ರಸಾದ ಕೊಟ್ಟ್. ಅರ್‌ಸನನ್ನಾ ಸೊಲ್ಪೊತ್ತ್ ಕಾಣ್‌ತ್. ಕಂಡ್ ನ್ಯೆಗಾಡ್ತ್. ಅರ್‌ಸನೀಗೆ ಸಿಟ್ ಬನ್ನ್ ನ್ಯೆಗಾಡಿದ್ಕಾರಣ ಕೇಣ್ತ. ಆಗ ಮಾಣಿ ಹೇಸ್‌ತ : ಅರಸ್ರೇ ನೀವ್ ಸತ್ ಮ್ಯೆಲೆ ಇಸ್ಟ್ ದೊಡ್ಡ ದೇಹನ್ನ ಸುಡೂಕ್ ತಕಣ್ದ್ ಹೋಪದಾರೂ ಹ್ಯಂಗ ಅನ್ದ ನ್ಯೆಗೆ ಬನ್ತ್ ನಂಗ್ ಅನ್ತ್.

ಈ ಮಾಣೀನ್ತಕಂಡೆ ಹೋಗಿ ಕಯ್ಕಾಲ್ ಕಟ್ಟಿ ಸ್ಯೆರಮನೇಗ್ ಹಾಕಿ ಅನ್ದ್ ಅರಸ ಆಜ್ಞೆ ಮಾಡಿದ. ಆಳ್‌ಗಳ್ ಬನ್ದೊ. ಕಯ್ಕಾಲ್ ಕಟ್‌ದೊ ದಡ್ಡಡ್ಡ ಡ್ ಮಾಣೀನ್ ಎಳ್ಕಣ್ದ್ ಹೋದೊ.

ಮಾಣಿ ಕೂಗ್ತ್ ; ಬೊಬ್ಬಿಡ್ತ್ ; ತಪ್ಪಾಯ್ತುಂತ್, ಆದ್ರೂ ಆಳ್‌ಗಳ್ ಕೇಣಿಲ್ಲ್ಯೆ. ಬಡ ಬ್ರಾಹ್ಮಣ ಬಾಳಹೊತ್ ಕಾದ. ಎಸ್ಟ್ ಹೊತ್ತಾದ್ರೂ ಮಗ ಬಾರದಿಪ್ಪದೇ? ಮಾಣಿಗೇನಾಯ್ತ್? ಹಾದೀಲ್ಯೆಲ್ಲಾ ಹಾವ್‌ಗೀವ್ ಕಚ್‌ತಾ? ಅತವಾ ಅರ್‌ಸನೀಗ್ ಇದ್ ತನ್ನ ಮ್ಗ ಅನ್ತ ಗೊತ್ತಾಗದೆ ಮಾಣೀನ ಜೋರ್ ಮಾಡೀನ? ಅತವಾ ಸಿಪಾಯಿಗಳ್ ಒಳಗ್ಹೋಪಕ್ಬಿಡದೇ ಮಾಣೀ ಅಲ್ಲೇ ಗಲಾಟೆ ಮಾಡ್ತಾ ಅಯ್ಕಣ್ಕಿತ್ತಾ? ಎನ್ದದೂ ಇರ್‌ಲಿ. ನಾನೇ ಹೊರಟ್ ಬಿಡ್ತೆ ಅನ್ದ ಆ ಬ್ರಾಮ್ಮಣನೇ ಹೊರಟ್ ಬ್ಬುದ್ದ.

...................... ಹೀಗೆ, ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಕತೆಯೊಂದು ಬಳಗೊಂಡಿರುವ ಕನ್ನಡ ಭಾಷೆಯನ್ನು ಉದಾಹರಣೆಗಾಗಿ ಕೊಡಲಾಗಿದೆ.

ಮೇಲಿನ ಪಠ್ಯದ ಪ್ರಮಾಣ ಕನ್ನಡದ ಅನುವಾದ ಕೆಳಗಿನಂತಿದೆ.

### ಮಾಣಿ ಬುದ್ಧಿ

ಒಬ್ಬ ಬಡ ಬ್ರಾಹ್ಮಣ ಇದ್ದ. ಅವನಿಗೆ ಒಂದು ದೇವಸ್ಥಾನದಲ್ಲಿ ಪೂಜೆ ಮಾಡುವ ಕೆಲಸ ದಿನಂಪ್ರತಿಯೂ ಆ ಬ್ರಾಹ್ಮಣ ಅರಸನಲ್ಲಿಗೆ ಹೋಗಿ ಪ್ರಸಾದ ಕೊಟ್ಟು ಬರುತ್ತಿದ್ದ. ಒಂದು ದಿನ ಆ ಬ್ರಾಹ್ಮಣನಿಗೆ ಹೋಗಲಿಕ್ಕಾಗಲಿಲ್ಲ. ಅದಕ್ಕಾಗಿ ತನ್ನ ಮಗನ ಹತ್ತಿರ ಪ್ರಸಾದ ಕಳುಹಿಸಿಕೊಟ್ಟ.

ಸ್ಥೂಲಕಾಯದ ಅರಸ ಗಂಭೀರವಾಗಿ ರಾಜಸಭೆ ಕರೆದು ಸಿಂಹಾಸನದ ಮೇಲೆ ಕೂತಿದ್ದ. ಆಗ ಈ ಹುಡುಗ ಒಳಗೆ ಹೋಗಿ ಅರಸನಿಗೆ ಪ್ರಸಾದ ಕೊಟ್ಟ. ಅರಸನನ್ನು ಸ್ವಲ್ಪ ಹೊತ್ತು ನೋಡಿದ. ನೋಡಿ ನಗಾಡಿದ. ಅರಸನಿಗೆ ಸಿಟ್ಟು ಬಂತು. ಆಗ ಹುಡುಗ ಹೇಳಿದ ಕಾರಣ ಅರಸರೇ ನೀವು ಸತ್ತ ಮೇಲೆ ಇಷ್ಟು ದೊಡ್ಡ ದೇಹವನ್ನು ಸುಡಲಿಕ್ಕೆ ತೆಗೆದುಕೊಂಡು ಹೋಗುವುದು ಯಾರು? ಹೇಗೆ ಎಂದು ನನಗೆ ನಗು ಬಂತು.

ಈ ಹುಡುಗನನ್ನು ತೆಗೆದುಕೊಂಡು ಹೋಗಿ ಕೈಕಾಲು ಕಟ್ಟಿ ಸೆರೆಮನೆಯಲ್ಲಿ ಹಾಕಿ ಎಂದು ಅರಸ ಆಜ್ಞೆ ಮಾಡಿದ. ಆಳುಗಳು ಬಂದು ಕೈಕಾಲು ಕಟ್ಟಿದರು. ದಡದಡನೆ ಹುಡುಗನನ್ನು ಎಳೆದುಕೊಂಡು ಹೋದರು.

ಹುಡುಗ ಕೂಗಿದ ಬೊಬ್ಬಿಟ್ಟ ತಪ್ಪಾಯ್ತು ಅಂದ ಆದರೂ ಆಳುಗಳು ಕೇಳಲಿಲ್ಲ.

ಬಡ ಬ್ರಾಹ್ಮಣ ಬಹಳ ಹೊತ್ತು ಕಾಯುತ್ತಾ ನಿಂತನು. ಎಷ್ಟು ಹೊತ್ತಾದರೂ ಹುಡುಗ ಬಂದಿಲ್ಲ. ಹಾವುಗೀವು ಕಚ್ಚಿತೋ? ಅಥವಾ ಅರಸನಿಗೆ ಇವನು ತನ್ನ ಮಗನೆಂದು ಗೊತ್ತಾಗದೆಯೇ ಗದರಿಸಿದನೋ ಅಥವಾ ಸಿಪಾಯಿಗಳು ಒಳಗೆ ಹೋಗಲಿಕ್ಕೆ ಬಿಡದೆ ಹುಡುಗ ಗಲಾಟೆ ಮಾಡುತ್ತಾ ಅಲ್ಲಿಯೇ ಉಳಿದು ಬಿಟ್ಟನೋ? ಎಂಥಾದ್ದೂ ಇರಲಿ ನಾನೇ ಹೊರಟುಬಿಡುತ್ತೇನೆ ಎಂದು ಆ ಬ್ರಾಹ್ಮಣನೇ ಹೊರಟು ಬಂದ.

## ಅಭ್ಯಾಸ - 2

(1) ಮಾಣಿ ಬುದ್ಧಿ ಕತೆಯಲ್ಲಿ ಬಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಭಾಷೆಯ ವಿಶಿಷ್ಟ ಪದಗಳನ್ನು ಪಟ್ಟಿ ಮಾಡಿರಿ.

................................ ................................ ................................

................................ ................................ ................................

................................ ................................ ................................

(2) ಪ್ರಮಾಣ ಭಾಷೆಯಲ್ಲಿ ಕೊಟ್ಟಿರುವ ಕಥೆಯ ಅನುವಾದದಿಂದ ಆ ಶಬ್ದಗಳಿಗೆ ಅರ್ಥವನ್ನುಹುಡುಕಿ ಅರ್ಥ ಬರೆಯಿರಿ.

................................ ................................ ................................

................................ ................................ ................................

................................ ................................ ................................

(3) ನಿಮಗೆ ಗೊತ್ತಿರುವ ಜನಪದ ಕಥೆಯೊಂದನ್ನು ಬರೆದು, ಅದರಲ್ಲಿ ಬರುವ ವಿಶಿಷ್ಟ ಪದಗಳನ್ನು ಪಟ್ಟಿಮಾಡಿ ಅರ್ಥ ಬರೆಯಿರಿ.

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

## 9.8 ಸಾರಾಂಶ

ಸಮಾನ ಧರ್ಮವುಳ್ಳ ಜನಗಳ ಗುಂಪಿಗೆ ಜನಪದ ಎನ್ನುವರು. ಇವರು ಪರಸ್ಪರ ಸಂಪರ್ಕ ಕ್ರಿಯೆಯಲ್ಲಿ ತೊಡಗಿದಾಗ ಜಾನಪದ ಹುಟ್ಟುತ್ತದೆ.

ಜಾನಪದವು ಮುಖ್ಯವಾಗಿ ಎರಡು ವಿಧ. (1) ವಿಷಯಕ ಜಾನಪದ (2) ಅಭಿವ್ಯಕ್ತಿಕ ಜಾನಪದ. ಅಭಿವ್ಯಕ್ತಿಕದಲ್ಲಿ ಮತ್ತೆ ಎರಡು ವಿಧ. ಮೌಖಿಕ ಮತ್ತು ಅಮೌಖಿಕ.

ಜಾನಪದವೆಂಬುದು ಮಾತು ಕೃತಿಗಳ ಸಂಬಂಧವನ್ನು ಪೂರ್ಣಗೊಳಿಸುತ್ತದೆ. ಕೆಲವು 'ಮಾತು' ಪ್ರಧಾನವಾದರೆ, ಮತ್ತೆ ಕೆಲವು ಕೃತಿ ಪ್ರಧಾನವಾಗಿರುತ್ತವೆ.

ಜನ ಸಮೂಹದ ನಡುವೆ ವಾಕ್ಸಂಪ್ರದಾಯದ ಮೂಲಕ ಹರಿದು ಬಂದಿರುವ ಕಾವ್ಯ ಮತ್ತು ಸಂಗೀತಗಳ ಸಮಾವೇಶವೇ ಜನಪದ ಗೀತೆ. ಇಂತಹ ಗೀತೆಗಳ ಶಿಲ್ಪ ಸರಳವಾಗಿರುವುದಲ್ಲದೆ ಶೈಲಿ ಸಹಜವಾಗಿರುತ್ತದೆ.

ಜನಪದಗೀತೆಸಾಹಿತ್ಯ ಪ್ರಮುಖವಾಗಿ ಎರಡು ವಿಧಗಳಾಗಿವೆ. ಒಂದು ಗೀತೆ, ಮತ್ತೊಂದು ಲಾವಣಿ. ಗೀತೆ ಭಾವನಿಷ್ಠ ಅಭಿವ್ಯಕ್ತಿಯಾಗಿದ್ದರೆ, ಲಾವಣಿ ವಸ್ತುನಿಷ್ಠ ಅಭಿವ್ಯಕ್ತಿಯಾಗಿದೆ. ಇವುಗಳಿಗೆ ಸಂಬಂಧಿಸಿದಂತೆ ಜನಪದ ಗೀತೆಗಳಲ್ಲಿ ಹಲವಾರು ವಿಧಗಳಿವೆ.

ಆದರ್ಶ, ಕಲ್ಪನೆ, ನೀತಿ ಮುಂತಾದ ಅನೇಕ ವಸ್ತುಗಳನ್ನೊಳಗೊಂಡ ಈ ಹಾಡುಗಳು ವಿಷಯದ ದೃಷ್ಟಿಯಿಂದಲೂ ವೈವಿಧ್ಯಮಯವಾಗಿವೆ.

ಲಾವಣಿ ಘಟನೆಗಳನ್ನು ವಿವರಿಸುತ್ತಾ ಮುಂದುವರಿಯುತ್ತದೆ.

ಗಾದೆಗಳು ಜನಸಾಮಾನ್ಯರ ಅನುಭವ ಸಾಂದ್ರತೆಗೆ, ಅಭಿವ್ಯಕ್ತಿ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ಗಾದೆಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ.

(1) ಬಾಯಿಂದ ಬಾಯಿಗೆ ಬಂದ ಗಾದೆಗಳು

(2) ಗ್ರಂಥಸ್ಥ ಗಾದೆಗಳು.

ಒಗಟುಗಳು ಸಾಮಾನ್ಯವಾಗಿ ಬುದ್ಧಿಪ್ರಧಾನವಾದವುಗಳು

ಗಾದೆಗಳಂತೆ ಒಗಟಿನಲ್ಲಿಯೂ ಉಪಮಾನ ಮತ್ತು ಉಪಮೇಯಗಳ ಕ್ರಮವಾದ ಸಂಯೋಜನೆಯಾಗಿರುತ್ತದೆ.

ಒಗಟುಗಳು ಅವುಗಳ ಅರ್ಥ ಮತ್ತು ರಚನೆಗೆನುಗುಣವಾಗಿ ಮೂರು ವಿಧ. (1) ರೂಪ ಪ್ರಧಾನ ಒಗಟು (2)ಕ್ರಿಯಾ ಪ್ರಧಾನ ಒಗಟು (3) ಅರ್ಥ ಪ್ರಧಾನ ಒಗಟು. ಇವಲ್ಲದೆ ಕರ್ತೃ ಪ್ರಧಾನ ಒಗಟುಗಳು, ಕರ್ಮ ಪ್ರಧಾನ ಒಗಟುಗಳು ಹಾಗೂ ಕರ್ತೃ ಸಂಬಂಧ ಕ್ರಿಯಾ ಪ್ರಧಾನ ಒಗಟುಗಳೆಂದೂ ಗುರುತಿಸಬಹುದು.

ರೂಪಪ್ರಧಾನ ಒಗಟುಗಳಲ್ಲಿ ನಾಮಪದಗಳಿಂದ ಕೂಡಿದ ವರ್ಣನಾತ್ಮಕ ವಾಕ್ಯಗಳಿರುತ್ತವೆ.

ಕ್ರಿಯಾ ಪ್ರಧಾನ ಒಗಟುಗಳಲ್ಲಿ ಕ್ರಿಯೆ ನಡೆಯುವ ವರ್ಣನೆ ಇರುತ್ತದೆ. ಸಂಕೀರ್ಣ ವಾಕ್ಯಗಳೊಡನೆ, ಸರಳ, ಉಚಿತ, ನಿಷೇಧಾತ್ಮಕ ಕ್ರಿಯಾಪದಗಳ ಬಳಕೆ ಇಂತಹ ಒಗಟುಗಳ ಲಕ್ಷಣವಾಗಿರುತ್ತದೆ.

ಅರ್ಥ ಪ್ರಧಾನ ಒಗಟುಗಳಲ್ಲಿ ಅರ್ಥದ ಪರಿಧಿಯನ್ನು ಹುಡುಕುವುದು ಕಷ್ಟವಾಗುವಷ್ಟು ಅರ್ಥ ಆ ರೂಪಗಳಲ್ಲಿ ಹುದುಗಿರುತ್ತದೆ.

ಜನಪದ ಕಥೆಗಳಲ್ಲಿ ಎರಡು ವಿಧ; ಸಂಕೀರ್ಣ ಕಥೆಗಳು ಮತ್ತು ಸರಳ ಕಥೆಗಳು. ಸಂಕೀರ್ಣ ಕಥೆಗಳಲ್ಲಿ ಅನೇಕ ಆಶಯಗಳಿರುವುದರ ಜೊತೆಗೆ ಘಟನಾವಳಿಗಳ ಸರಪಳಿಗಳು ಹಾಗೂ ಅತಿಮಾನುಷ ವಾತಾವರಣ ಇರುತ್ತದೆ.

ಸರಳ ಕಥೆಗಳೆಲ್ಲ ಕಡಿಮೆ ಆಶಯಗಳಿಂದ ಕೂಡಿದ ಸಣ್ಣ ಕಥೆಗಳಾಗಿರುತ್ತವೆ.

## ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

1. ಕೊಡೆ
2. ಬಾಯಿ
3. ನಾಣ್ಯ
4. ನಕ್ಷತ್ರ ಆಕಾಶ
5. ಚಂದ್ರ
6. ನಾಲಿಗೆ
7. ತಗಣಿ
8. ಕಣ್ಣು
9. ಹೊಗೆ
10. ಹಲಸಿನ ಹಣ್ಣು

**ಅಭ್ಯಾಸ** - 2

(1) **ಬ್ರಾಮ್ಮಣ**
**ಬರ್ಕಿತ್**
**ಹೋಪ್ ಕಾಯಿಲ್ಲೆ**
**ನೈಗಾಡ್ತ್**
**ಬಣ್ರೊ**

(2) **ಬ್ರಾಹ್ಮಣ**
**ಬರುತ್ತಿದ್ದ**
**ಹೋಗುವುದಕ್ಕೆ ಆಗಲಿಲ್ಲ**
**ನಕ್ಕ**
**ಬಂದರು.**